ಅಮ್ಮಾವ್ರ ಗಂಡ

ಟಿ. ಪಿ. ಕೈಲಾಸಂ

ಅಮ್ಮಾವ್ರ ಗಂಡ

ಯಜಮಾನ್ರ ಹೆಂಡ್ತಿ

ಕೈಲಾಸಂ

ಮಾಧವ ಸನ್ಸ್

ಮದರಾಸು – ಬೆಂಗಳೂರು

ಮುದ್ರಣಕಾರರು:

ಕರ್ಣಾಟಕ ಪಬ್ಲಿಷಿಂಗ್ ಹೌಸ್

ಕೋಟೆ– ಬೆಂಗಳೂರು

ಆಕರ : https://archive.org/details/unset0000unse_g5d2

ಓಸಿಆರ್: ವಿಶು [https://vishwakoshaagaara.blogspot.com/]

ಮೊದಲನೆಯ ಮುದ್ರಣ

ಸ್ವಭಾನು ಸಂವತ್ಸರ–ಆಶ್ವಯುಜ

ಶರನ್ನವರಾತ್ರಿ

1943

ಬೆಲೆ ಒಂದೂಕಾಲು ರೂಪಾಯಿ

ಪಾತ್ರಗಳು

ಅಮ್ಮಾವ್ರು ಸೌ. Saroja B.A., (cauv.)

ಗಂಡ Subbanna, B.A., B.L., Advocate

ಯಜಮಾನ್ರು Narasimhayya, M.A., (Cauv.) M.C.S. (Mys)

Senior Asst. Comr.

ಹೆಂಡ್ತಿ ಸೌ. Kamalamma, M.A., (Cauv.)

ಆಯಾ ದೇವೇರಿ

— Gentleman —

ಈ ರೂಪಕದಲ್ಲಿ ಬರುವ ಪಾತ್ರಗಳೆಲ್ಲವೂ

ಸಮಾಜದಲ್ಲಿ ಕಂಡುಬರುವವುಗಳಾಗಿದ್ದರೂ

ಯಾವ ಒಂದು ವ್ಯಕ್ತಿಯನ್ನೂ

ಸೂಕ್ಷಿಸಿ ಬರೆದದ್ದಲ್ಲ.

ಅಮ್ಮಾವ್ರ ಗಂಡ

Scene I.

[Sitting room-ಅಮ್ಮಾವ್ರು:—in a rocking chair, R. fore-ground.—ಗಂಡ:— L. middle-ground, rocking a cradle—appointment of room a la Rs. 300 per mensem householder ಅಮ್ಮಾವ್ರು up-to-date,—president of the Ladies Club Etc.,—ಗಂಡ: ಪಂಚೆ and torn bunian.]

ಗಂಡ

(Rocking the cradle and meekly)

ಏನದ್ ನೀನು ಓದ್ತಿರೋದು? interesting ಏ?

ಅಮ್ಮಾವ್ರ

(Rocking the chair and smugly)

ಅಲ್ದೆ ಏನು—at least ನನಗೆ interestingಉ........ನನಗೇಂದ್ರೆ.......ನಮಗೆ, for us womenಉ!........ ಈ horrible institutionಉ.......marriageಉ ಅಂದ್ರೆ manಏ superiorಉ ಅಂತ... ಇದು ಹೋಗೋವರ್ಗೂ ನಿಮಗೆಲ್ಲಿ interestಉ ಈ book ನಲ್ಲಿ?..........

ಗಂಡ

(very meekly) ಒಂದ್ವೇಳೆ...of course....ನಿನ್ judgementನಲ್ಲಿ, literary mattersನಲ್ಲಿ ಹೇಳ್ತೇನೆ........ನನಗೆ........ personally speaking of course........ complete confidence ಇರೋದ್ರಿಂದ, ನನಗೆ ಆ bookನಲ್ಲಿ interest ಇಲ್‌ದಿದ್ರೂನೂವೆ, ಆ bookನಲ್ಲಿ interested ಆಗಿರೋ ನಿನ್ನಲ್ಲಿ ನನಗೆ interest ಇದೇ ಅಂತ...

ಅಮ್ಮಾವ್ರು

ಸಾಕು........ ನಿಮ್ಮ subtle attempts at flattery! ಇಲ್ಲೇನೂ ಬೇಯೋಹಾಗಿಲ್ಲ..... ಅದಕ್ಕೆ brutesಉ ಅನ್ನೋದು ನಿಮ್ಮನ್ನೆಲ್ಲ....ನಮ್ಮ weakness ಗೊತ್ತು ನಿಮಗೆ... Vanity ಅಂಬೋದು........ಈ ತಂತೀ ಮೇಲೆ ಮೀಟಿ, ಮೀಟಿ, ಮೀಟಿ—at our most impressionable ageಉ—"You are the queen of my lifeಉ"........ "You will be the guiding star of my lifeಉ"....... "if you marry me, I shall be a slave to you" ಅಂತ young girlನ head ಎಲ್ಲ giddy ಮಾಡಿ daze ಮಾಡೋದು !!

ಗಂಡ

(Loud sottovoce)........ What a memory !...

ಅಮ್ಮಾವ್ರು

ನಿಲ್ಲ್‌ಸಿ ನಿಮ್ಮ Interruptionsoo!....(resuming) ಇನ್ ಮದ್ವೆ ಆಯ್ತೋ....... ಆ poor vanity eaten foolಉ, ನಿಮ್ಮ ಕುಟುಂಬದಲ್ಲಿ ಒಂದು simple factoroo...ನಿಮ್ಮ

brutal man's career ನಲ್ಲಿ ಒಂದು simple phaseoo…ನಿಮಗೆ ಮಕ್ಕಳ್ಹೆರೋಕೆ….ನಿಮ್ಮ ಮನೆ ನೋಡ್ಕೊಳ್ಳೋಕೆ….a cheap unpaid ayah, cookoo, house-keeperoo, sweeping womanoo, all combinedoo…ಅಬ್ಬ!! What a terrible price to pay for one moment's yeilding to one's vanity! Generations ನಿಂದ ಹೀಗೆ ನಮ್ಮನ್ನ brutalise ಮಾಡಿ, ಮಾಡಿ, ನಿಮ್ಮ thumb ಕೆಳಗೆ ಇಟ್ಕೊಂಡಿದ್ರಿ! But thank God, we women have woke up (flourishing her book aloft) and thanks to the angelsoo like the writer of this bookoo……..

ಗಂಡ

(interrupting) ಯಾರವ್ನು? Authoroo?……..

ಅಮ್ಮಾವ್ರು

(with an indignant look) ಅವನು? He! Man ಇಗೆ ಅಷ್ಟು sense of honesty and justice ಇದೆಯೇನು? ಅವನಲ್ಲ……. ಅವಳು…….. she! ಬರದೋಳು, womanಉ………… ನಮ್ಮಲ್ಲೊಬ್ಳು…….. horrible ಹೆಂಗ್ಸು ಅಂತೀರಲ್ಲಾ ಅವ್ಳು ಬರೆದದ್ದು. Titleಉ "The World's Redeemer or woman's place in God's creation''oo ಅಂತ.

ಗಂಡ

(sottovoce) World's Redeemer!…. ಹಾಗಾದ್ರೆ, worldoo ಮೊದಲು manನ monopoly ಆಗಿದ್ದಾಗೂ ಅದ್ನ devilಗೋ ಏನೋ….ಕುದುವಿಟ್ಟ ಹಾಗೂ….. ಮತ್ತೆ…….. ಈಚೆಗೆ……. ಅಂದ್ರೇನು……. ಈಕೆ ಈ ಪುಸ್ತಕ ಬರೆದಿಂದೀಚೆಗೆ……. perhaps

womanಉ ತನ್ನ rightsನ ತಾನು assert ಮಾಡ್ಕೊಂಡು, ತಾನು redeem ಮಾಡ್ಕೊಂಡ್ ಹಾಗೂ....ಈ ಪುಸ್ತಕ.......

ಅಮ್ಮಾವ್ರು

(interrupting) ಹಾಗೇನೂ!...ಹೀಗೇನೂ! ಈಚ್ಗೇನೂ....ಆಚ್ಗೇನೂ? woman's rights ಯಾವಾಗ಼್ೂ ಅವಳ ಕೈಲೇ ಇದ್ದು.....The hand that rocks the cradleಉ rules the worldoo........!!

ಗಂಡ

(after a deep sigh) ಹಾಗಾದ್ರೆ ಕ್ಷಮ್ಸು...... if you don't mind, I shall go out and stand outsideoo fora breath of fresh airoo;....being a bruteoo....like our dog Tigerಉ...ಅದನ್ನೀನು dog-cartನ ಹಿಂದೆ ಓಡ್ಸ್ಕೊಂಡು ಹೋಗೋ ಹಾಗೆ ನನಗೂನೂ...brutish avidity for fresh air and exerciseoo...... ಆದ್ದರಿಂದ....... will you........ in the meanwhile, without disturbing yourself of course....rule the worldoo (ಒಂದು ಹಗ್ಗವನ್ನು ತೊಟ್ಟಿಲಿಗೂ rocking chairಗೂ ಕಟ್ಟಿ ಮುಗಿಸುತ್ತ) for a few minutesoo........?

ಅಮ್ಮಾವ್ರು

(looking him in the eye with a sub-conscious soft look—crossing over and taking charge of the cradle) ಸ್ಸರಿ: ಹೋಗ್ಬನ್ನಿ ! Tigerಉ, ಹೊರಗೆ ಬಿಟ್ರೂ, ಅರ್ಧ ಗಂಟೇಲಿ ಮನೇಗೆ ಬಂದ್ ಸೇರುತ್ತೆ....... (ಗಂಡ reaches clothes rack and

puts on coat and turban)....ಮರೀಬೇಡಿ...and does not disgrace the house by going out without a collaroo........!

[ಗಂಡ goes back again to rack to wear collar]

ಗಂಡ

Quite so! Quite so! ಮರೆತಿದ್ದೆ... ....Brutal instinct again to ignore the curb of conventions of civilisationoo....ಕ್ಷಮ್ಸು.....!

ಅಮ್ಮಾವ್ರು

(gently letting go off the cradle and walking towards door C) ನೀವು ಬರೋಷ್ಟ್ರಲ್ಲಿ... ಅಡಿಗೆ...

ಗಂಡ

(wearing the collar elaborately)

Don't be silly dear!........ ನಾನು brute ಆದ್ರೂನೂವೆ–ಅಷ್ಟು brute ಅಲ್ಲ....culinary arrangements ಎಲ್ಲ completeಉ....ಬೇಳೆ ಸ್ವಲ್ಪ rebelliousoo; but...soda will melt its heartoo within half an houroo... ಅಷ್ಟ್ರಲ್ಲಿ ನಾನೂ ಬಂದ್‌ಬಿಡ್ತೇನೆ...

ಅಮ್ಮಾವ್ರು

ಆದ್ರೂನೂ...

[Disappears through door C]

ಗಂಡ

[Looks fixedly at the door C....sighs deeply, kisses the sleeping baby in the cradle] If this little scoundrel with her beautiful eyes doesn't develop her fine spirit too, I will smother him! (sighs deeply and moves towards door to exit; confronting a flashly - dressed, hat - and - stick-in- hand gentleman) ಯಾರದು? Who are you? What do you want? ಎಲ್ಲಿಗಯ್ಯ ನುಗ್ತಿಧೀಯಾ?....

Gentleman

ನೀನು ಯಾರೋ? I want to see the president of the women's associationoo. I am a delegate from.......

ಗಂಡ

(ಥಟ್ಟನೆ) Forgive me sir: please come in: kindly sit down...make yourself comfortable. (motioning him to a chair and putting a magazine before him) The president will be here in a minute.

Gentleman

ನೀನು ಯಾರಯ್ಯಾ ? Who are you I say?

ಗಂಡ

ನಾನೇ? (hard up for a reply........with a merry twinkle in his eye)....ನಾನು....I am the man who says "please come in.......kindly sit down....make yourself comfortable...the president will be here in a minute" etc...

[Exits briskly]

[Enter ಅಮ್ಮಾವ್ರು]

ಅಮ್ಮಾವ್ರು

ಏನದು? ಇಲ್ಲಿಗೆ ಬಂದದ್ದು?

Gentleman

I have come on behalf of...

ಅಮ್ಮಾವ್ರು

ಅರ್ಥವಾಯ್ತು....... ನನ್ನ decision finaloo........I will have no woman on the association rolls—so long as I am president— .... who deserts her hearth and home. ಈಗ ನಾವು fight ಮಾಡ್ತಿರೋದು....ಮನೇಲಿ ಇದ್ಕೊಂಡು.... Equal rights with husbands ಗೆ!......ನಿಮ್ಮ sister ನ attitudeಉ.........woman's responsibilities of mother-hoodನ ತಪ್ಪಿಸ್ಕೊಂಡು ಕುಣ್ದಾಡೋಕೆ...... ಅದು un-woman-likeoo! ನೀವು ಬಂದದ್ದು ತಪ್ಪು!!

Gentleman

ನನ್ನ sister ಏ ಬರಬೇಕೂಂತಿದ್ಲೂ.......

ಅಮ್ಮಾವ್ರು

ಹೌದು!....ಆ old mental slavishness ಅವಳಿಗೆ ಇನ್ನೂ ಇರೋ ಹೊತ್ತಿಗೇನೇ ತಾನು ಬರೋಕೆ ಹೆದರಿಕೊಂಡು brotherನ ಕಳಿಸಿದ್ದು ! please go away!

Gentleman

You must forgive me!....ನಾನು...... I was only thinking of my sister........

ಅಮ್ಮಾವ್ರು

ನಿಮ್ಮ sisterಗೆ think ಮಾಡೋದನ್ನ ಮರ್ತು ಬಿಟ್ಟು.... for a change...think for yourself........ಆ ಬ್ಬ!! ನೀವೂ ಒಂದು manಏ? That is the door you came by!

[The gentleman exits crest-fallen....the lady closes the door with a bang...........rushing back precipitately to the cradle]

ಅಯ್ಯಯ್ಯೋ! ಮಗು ಎದ್ದು ಬಿಡ್ರೋ !....ಸದ್ಯ?

[sighing at the sight of the sleeping baby... resumes rocking the cradle.]

—ತೆರೆ ನಿಧಾನವಾಗಿ—

Scene II.

(Street)

[Discovered ಗಂಡ and ಯಜಮಾನ್ರು]

ಯಜಮಾನ್ರು

Good God!… Dear boy!……. Fancy meeting you here and like this!

ಗಂಡ

ಯಾಕ್ ನರಸಿಂಹ್! ಏನು excitement ಇದು? ಮನಸ್ಸಿಗೆ ಶಾಂತಿ ತಂದ್ಕೋಮಗು….ನನ್ನ ಹೀಗೆ ನೋಡೋದರಲ್ಲಿ ಏನಿಥೆ wonderoor….ight as clock workoo dear boy, I pass this way at this time and "like this" as you put it…… every day…! ನೀನು ಬೇಕಾದ್ರೆ, ನಿನ್ನ lifeoo………. ನಿನ್ನ positionoo, ಈ ಬಾಬ್ತುಗಳನೆಲ್ಲ ನಮ್ಮ school daysನಿಂದಲೇ fix ಮಾಡ್ಕೊಂಡು, ಈಗ faithful ಆಗಿ ಜಾರೀಗೆ ತರ್ತಿರೋನು, ಈ rotten ಗಲ್ಲೀಲಿ ನಡೀತಿರೋದು ಆಶ್ಚರ್ಯ…Borrun Centre forwardoo….but……….but—ಒಂದು…..ten yards ಯಾವಾಗಲಾದ್ರೂ ಓಡಿದ್ದೀಯಾ? ……..in your lifeಉ………. ಆ………..? ಹೌದೂ! ಇದೇನು new mania ನಿನ್ದು? ನಮ್ಮ good old days ನಲ್ಲಿ…… ಕಾಲು ಚಾಚೋಕೆ ಹೇಸಿಗೆ! ಈಗ actually ನಡಿಯೋಕೆ ಷುರು ಮಾಡಿದೀಯಾ!? If you are not very careful and if you keep up this habit of walking, you run the risk of suffering from an attack of…… good digestionಉ…. !!

ಯಜಮಾನ್ರು

What do you mean?........

ಗಂಡ

I mean... nothing more or less, my dear boy, than....ಇಷ್ಟೆ,...that you have always had, before you, (poking at ಯಜಮಾನ್ರು's stomach)—a large future!! ನಿನಗಿರೋದು ಒಂದೇ excuseoo........on your way home from the clubಏ...lodge meetingಏ........ ?

ಯಜಮಾನ್ರು

(laughing) ಏನ್ peculiar ನೀನು, ಸುಬ್ಬು?...! ನೀನು ಈ ಸ್ಥಿತೀಗೆ ಬಂದಿದ್ರೂನೂವೆ...... ನಿನಗೆ good old college days ನಲ್ಲಿ ಇದ್ದ humour ಹೋಗಲಿಲ್ಲವಲ್ಲ!....you needn't be frightened, dear boy!....ನನಗೆ walking ಮೇಲಿದ್ದ abhoranceoo ಈಗ ಏನೂ ಹೋಗಲಿಲ್ಲ...... my car, you know, has broken down, you know!....but...joking apart.......Subbu!!....ಎಷ್ಟು ದಿನ ನೀನು ಈ absurd positionನ stick ಮಾಡೋದು?.......

ಗಂಡ

(With controlled temper)

ಯಾವ positionoo ?

ಯಜಮಾನ್ರು

Excuse me, dear boy, the whole town is laughing at you!!

ಗಂಡ

Yes in the old days… …. it was laughing…with me! …ಈಗ…at me! It's only fair!….point ಏನು?

ಯಜಮಾನ್ರು

ಏನೇನೂ….I shall be plain…….!

ಗಂಡ

'Shall' ಯಾಕ್‌ಮಗೂ?—future timesoo?—pastoo… presentoo… ಯಾವಾಗಲೂ plainಏ ನೀನು.

ಯಜಮಾನ್ರು

Shutttupp! ಮಾತ್ಹಾಡ್ಬೇಡ! Point ಏನೇ?….ಹೇಳ್‌ಬಿಡ್ತೇನೆ ಕೇಳು….the whole town is laughing at your being hen- peckedoo!!…….. ನಿನ್ನ friends ಎಲ್ಲಾ… ಇಷ್ಟು manly chapoo…….. old football championoo……leader of the local baroo….gayest spirit of the townoo, ಹೀಗಿದ್ದೋನೂ….ಈಗ ಹೀಗೆ guts all goneoo! foot ball and friendsoo…….. gone also!—' ಮನೆ ಆಯ್ತು ಮಿಸೆಸ್ ಆಯ್ತೂಂ'ತ ಹೀಗೆ henpecked ಆಗಿ ಬಿದ್ದಿರೋ ನಿನ್ನೂ, ನಿಮ್ಮಮನೆ ಈ dirty surroundingsನಲ್ಲಿ ಇರೋದ್ನೂ…ನೋಡೀ ನಗ್‌ತ್ತಿಧಾರೆ!……. Hyenas— ಸುಬ್ಬೂ! — ಹೈನಾಸ್ ಹಾಗೆ….laugh ಮಾಡ್ತಿಧಾರೆ…ಹ್ಹ ಹ್ಹಹ್ಹ …..!! ಕ್ಷಮ್ಸು, dear boy !!

ಗಂಡ

"Hyenas"!? ಕತ್ತೆ-ಕಿರುಬ-compositionಉ! ಕತ್ತೆ ಎಷ್ಟು…. ಕಿರುಬ ಎಷ್ಟು proportionಉ…..? Don't be a hyena minus the ಕಿರುಬ Narasim! ಕ್ಷಮ್ಸೋದೇನು! ನಿಜವೇ!… "ಮನೆ cocks townoo…ಮನುಷ್ಯ henpeckedoo."!!…ನಗದೇ ಇದ್ದಾ ರೇ— ಕತ್ತೆಕಿರುಬಗಳೂ…..?

ಯಜಮಾನ್ರು

My dear boy! you are going to pieces! I will tell you what. Come to the club, have a drink, have a smoke and damn every thing else!

ಗಂಡ

Impossible, ನರಸಿಂಹ್ ! my wife, you know, ಮನೇಗೆ ಹೋಗುತ್ಲೂ ಮುದ್ದಿಟ್‌ಬಿಡ್‌ತಾಳೆ….. mouth ಮೇಲೆ! ಮೊದೂಲು!

ಯಜಮಾನ್ರು

(ಗಂಡನ ಹೊಟ್ಟೆಯನ್ನು with his fore-finger ಚುಚ್ಚುತ್ತ)

Oh! ho! after all, affectionoo?!

ಗಂಡ

(ಯಜಮಾನರ ಹೊಟ್ಟೆಯನ್ನು double ಚುಚ್ಚುತ್ತ)

No! No! Before all, inspectionoo!

ಯಜಮಾನ್ರು

Seriously ಸುಬ್ಬು! I am going to put a stop to this.

ಗಂಡ

ಅರ್ಥವಾಗಲಿಲ್ಲ...ಹ್ಯಾಗೆ?.......

ಯಜಮಾನ್ರು

By speaking to your wifeoo! By convincing her that her place is one of a help-mate, a subordinate, to the man of the houseoo.

ಗಂಡ

ಕ್ಷಮ್ಸು! dear boy! you would be a marvel if you did!...ನನಗೆ ಅವಳ್ನ ತಿಳಿದ ಮಟ್ಗೂ ಹೇಳ್ತೇನೆ ಕೇಳು..."ಮೊದಲು ನಿನ್ನ jobನ resign ಮಾಡಿ ಒಂದು six months ಕೂಲಿಕೆಲ್ಸಮಾಡಿ, ಈ ನಿನ್ನ large futureನ reduce ಮಾಡ್ಕೊಂಡು...average human being ಆಗಿ ನನ್ನೆದುರಿಗೆ ಬಂದು ನಿಂತು....ಆ ಮೇಲೆ ಮಾತಾಡು" ಅಂದ್‌ಬಿಡ್‌ತಾಳೆ. It is best my boy, that you do not face her like this!!

ಯಜಮಾನ್ರು

(mad as a bull) What do you mean?...I will tell you what I will do.......I shall show her an ideal woman!....... you know the old method....teaching by example. My wife you know, sweet creature; you know the type; perfect lily ....: ಸೀತಾದೇವಿ typoo... ಹಗ್ಲೂ ರಾತ್ರಿ ಗಂಡ, ಗಂಡ....perfect obedience......no

protesting......ಗಂಡ ಹೇಳಿದ್ದಾಗೆ ಕೇಳ್ತಿರೋ ಹೆಂಡ್ತಿ! Do you know?...ನನಗೆ ಬರೋದು five hundred rupeesಉ; ಅದರಲ್ಲಿ seventy five rupees ನಲ್ಲಿ house-hold manage ಮಾಡ್ತಾಳೆ........ಮಿಕ್ಕದುಡ್ಡೆಲ್ಲ ನಂದೇ! no worrying me for jewelsoo...sariesoo etc., !....ಆಯ್ತೇ !? ನನ್ನ carನ ಮಾತು ಎತಿದ್ದಿಲ್ಲ, ನನ್ನ victoriaನ ಹತ್ತಿದ್ದಿಲ್ಲ. ಹಗಲೂ ರಾತ್ರಿ her only careoo, is to take care of the seven beautiful children she has presented me with. (thumping ಗಂಡ on the back) there....is a record, my boy, of a perfect wifeoo, and remember, she is hardly thirty!.... And to think, that, peopleoo, ನನ್ನ well-wisherಉ ಸುಬ್ಬೂ!....advised me against a second marriageoo!!........ ಅವಳನ್ನ ಕರಕೊಂಡು ಬಂದು, ನಿಮ್ಮನೇಗೆ,. I will make her advise your wifeoo.... ಕ್ಷಮ್ಸು ಸುಬ್ಬು....and make her realise........... her positionoo in your house-holdoo !!

ಗಂಡ

(sottovoce) ಮೂವತ್ತು ಕೂಡ ಇಲ್ಲ ಮಯಸ್ಸು....! ಏಳು ಮಕ್ಳು... ಎರಡನೇ ಹೆಂಡ್ತಿ! ಇವನ್ ಸಂಬ್ಳ 500ರೂಪಾಯಿ!... ಇವನ... car ಮಾತು ಎತ್ತಿದ್ದಿಲ್ಲ...ವಿಕ್ಟೋರಿಯ ಹತ್ತಿದ್ದಿಲ್ಲ....ಇವನ house-holdನೂ ಜರಿಗ್ಸಿ........ ಈ ಮಕ್ಕಳ್ನೂ.... ಇಟ್ಕೊಂಡಿದಾರೆ 75 ರೂಪಾಯ್ನಲ್ಲಿ....ಅಬ್ಬಬ್ಬಬ್ಬ! ಈ selfish pigಗೆ ಬುದ್ಧಿ ಕಲಿಸೋಕೆ ಸರೋಜ Is the very person! (aloud) ನನಗೇನೋಪ್ಪ, ನಿನ್ನ wifeoo ನನ್ನ wifeಗೆ teach ಮಾಡೋಕಿಂತ, ನನ್ನ wifeoo ನಿನಗೆ teach ಮಾಡಿಬಿಟ್ಟಾಳು ಆಂಬೋ ಹೆದರಿಕೆ... but still please yourself..... please yourself........ಯಾವಾಗ ಬರ್ತೀಯಾ?

ಯಜಮಾನ್ರು

ಬರ್ತ್ತೀಯಾ? ನಾನೆ? not at all....not now! ಈಗ....ನೀನ್ಬರ್ಕೀಯಾ....ನನ್ ಜೊತೇಲೀ....to see and learnoo how....... ಹ್ಯಾಗೆ....I mean;....but do...dear boy!....I shall show you... not only... ಹ್ಯಾಗೆ wife ಇರ್ಬೇಕು....but also....ಇದಾಳೆ........ಬಾ!!

[Exeunt Right]

Scene III

[The office room of ಯಜಮಾನ್ರು used usually with pertinent appointments of a hotch-potch of Pseudo-European,—morning visiting—parlour, with furniture including a cheval glass set, and an uncomfortable lounge which itself, with a glass, would have been comfortable along of a bed-room suite. The white-wash of the walls is almost all covered up with Group Photoes of ಯಜಮಾನ್ರು, which, recording his nomination—probationary — assistant Commisioner ship — subaltern days to his present Secretariat job, is a chronological demonstration of his inflation from nine-stone to his present fourteen-stone.]

[Found discovered two boys, six and four of age.]

ದೊಡ್ಡೋನು

ಅಪ್ಪನ ಹೆಜ್ಜೆ!

(Runs away—Exit L running)

[Enter ಯಜಮಾನ್ರು & ಗಂಡ]

ಯಜಮಾನ್ರು

[Comes up to ಚಿಕ್ಕ ಹುಡುಗ and coolly adjusting his instep to the boy's nether part as a full back kicking off a goal kick, lifts him aloft and wafts him into the sidewings L]

The rising generation!

Office roomನಲ್ಲಿ ಏನ್ ಕೆಲಸ ಈ bratsಗೇ?

ಗಂಡ

Damit Narsim—don't be a brute! ಯಾಕ್ ಒದ್ದದ್ದು ಆ ಮಗೂನ?

ಯಜಮಾನ್ರು

ಮಗು! ಅವನು! ನಿನ್ನೂ ನನ್ನೂ ನುಂಗೋ ಯಮಘಾತ್ಕ! He will live to ruin me!: ನನ್ನ red ink ನೂ black inkನೂ ಕಲಸಿಬಿಟ್ಟೂ ಈಗ ಯಾವ ಬಣ್ಣಾಪ್ಪಾ ಅಂತ questionoo ನನಗೇ! That is the sort of scoundrel he is! Never mind ನನ್ನ ಮಕ್ಕಳ

ಕಥೆ! ಬಂದ purpose ಮರೀಬಾರ್ದು….I shall show you!…. But… … ತೆಪ್ಪಿ ಬೇಕೂ ನೀನೂ!…….none of your gutless interferences?!

ಲೇ!!!

(Thumping his chest)

Tiger of the Houseoo!!

ಕಮಲು

ಏನು

ಯಜಮಾನ್ರು

ಏನೇನು?--ಬಡಕೋ ಬೇಕೇ ನಿತ್ಯ?

(Sitting in a chair & stretching both his legs)

(ಕಮಲು ನರಸಿಂಹಯ್ಯನ ಬೂಟ್ಸು ಬಿಚ್ಚುವಳು)

[ಈ…….. ತನಗೆ ಅನ್ಯಾಯವಾಗಿ ತೋಚುವ, "ಗಂಡನು" ಏನೂ ಮಾಡಲಾರದೆಯೂ, ನಿನಾದರೂ ಮಾಡಬೇಕೆಂದು ಹೇಳುವ ಹೃದಯಕ್ಕೆ ಏನನ್ನೂ ಮಾಡಲಶಕ್ತನಾಗಿ ಕೈ ಕೈ ಹಿಸುಕುತ್ತಿರುವುದನ್ನೂ, ಗಮನಿಸಿದ]

ಯಜಮಾನ್ರು

Stopit! I know what you are thinking, but discipline, dear boy!, disciplineoo!! ನಿನ್ನ Homeoo ನೀನು ruin ಮಾಡ್ಕೊಂಡೇ—but ನನ್ನ ಹೋಮೂ........ (ಹೆಂಡತಿಗೆ) ಬೂಟ್ಸೂ ಸಾಕ್ಸೂ ಇಟ್ಟು ಬಿಟ್ಟೊ... ಇಬ್ಬರಿಗೂ ಎರಡು cup coffee... ಭೇಗ.......ಎರಡು ನಿಮಿಷದಲ್ಲಿ... ಆಗುತ್ತ್ಯೇ?

ಕಮಲು

ಹೂಂ.

ಯಜಮಾನ್ರು

Liar! ಯಾರಹತ್ರ ಈ ಸುಳ್ಳು! ಎರಡು ನಿಮಿಷ! ನೀರೂ ಕಾಯಿಸಿ ಪುಡಿಹಾಕಿ ಸೋದಿಸಿ ಹಾಲೂ mix ಮಾಡ್ಕೊಂಡು.......... ಇನ್ನು ಸಕ್ಕರೆ ಬೇರೆ.......... In two minutes—ಸುಳ್ಳೂ !— ಸುಳ್ಳು ಹೇಳೋ ಹೆಂಗಸನ್ನ ಇಟ್ಟುಕೊಂಡು ಏನು ಮಾಡೋದು ನಾನು? My God!?

ಕಮಲು

ಕಷಾಯ ಇದೆ... ತಣ್ಣಗಿದ್ರೂನೂವೆ ಮಕ್ಕಳಿಗೆ ಕಾಸಿದ ಹಾಲು ಇದೆ, ಬಿಸಿಯಾಗಿ,..... ಭೇಗ ತರ್‍ತೇನೆ.

[Exit Centre]

ಗಂಡ

Do you call yourself a man Narsim?

ಯಜಮಾನ್ರು

ಲ್ಲೋ! I am not a man in my house and you, are not a man in your house! Are you satisfied?………… you will not be! Because, in my house I am not a manoo but a Godoo! In your house you are not a manoo but a wormoo! ಆಃ! ಬಂದ್ಲು!……I shall show you!!

[ಕಮಲುವು ಎರಡು ಬೆಳ್ಳಿಯ saucer ಮನೇಲೆ spoon ಸಮೇತ ಬೆಳ್ಳಿಯ cupsಗಳನ್ನು ಮೇಜಿನ ಮೇಲಿಟ್ಟು ತಲೆಬಾಗಿ ನಿಲ್ಲುವಳು. ನರಸಿಂಹಯ್ಯನು ಒಂದು saucer—cupನ್ನು ಸುಬ್ಬಣ್ಣನ ಕೈಗೆ ಕೊಟ್ಟು, ಮತ್ತೊಂದು ಸಾಸರ್ ಕಪ್ಪನ್ನು ಎಡಗೈಯಲ್ಲಿ ಹಿಡಿದುಕೊಂಡು ಬಲಗೈಯಿಂದ spoon ಹಿಡಿದು ಕಾಫಿಯ ಅಲ್ಪಾಂಶವನ್ನು ಅದರಿಂದ ತೆಗೆದು ನಾಲಿಗೆಗೆ ತಾಕಿಸಿ ಮುಸಾಂಬ್ರವನ್ನು ಬೇವಿನ ಎಣ್ಣೆ ಯಲ್ಲಿ ಅರೆದ ಲೇಹ್ಯವನ್ನು ಜಿಹ್ವಾಗ್ರದಲ್ಲಿ ತಾಕಿಸಿದವರ ಮುಖದಂತೆ ತನ್ನ ಮುಖವನ್ನು ಮಾಡಿಕೊಂಡು]

ಏನೇ ಇದೂ….ಆಂ? ಕೈಯೆಣ್ಣೇ-ಅದೂನೂ guest ಇರೋವಾಗ! you horror! ಏನರ್ಥ? This—poisoning your husband? (to subbu) Dear boy! ಕುಡೀಬೇಡ! stop it!…… God knows! ನಿನಗೇನಾಗುತ್ತೋ?!…….

ಕಮಲು

ಇನ್ನು ಮೇಲೆ ಸರಿಯಾಗಿ ಮಾಡ್ತೇನೇಂದ್ರೆ.

ಯಜಮಾನ್ರು

'ಇನ್ನು ಮೇಲೆ'? ನನ್ನ ಮಾನಾ ಎಲ್ಲಾ ಪ್ರಪಂಚದ ಎದುರಿಗೆ ಕೆಟ್ಟ ಮೇಲೆ– ಇನ್ನೇನಯ ಮಾಡಿದ್ರೇನು?

Get out of my sight–ನೀನೋ ನಿನ್ನ ಹಾಳು ಮೂತೀನೋ…….Get out (ಕಮಲು ನಿಷ್ಕ್ರಮಿಸುತ್ತಲಿರಲು….) ಸ್ವಲ್ಪಿರು! ನೀನು ಹೋದ್ರೇನು? ನಿನ್ನ ಈ ಹಾಳು ಸ್ವರೂಪ ಎತ್ಕೊಂಡ್ಹೋಗು!

[Snatches a beautiful silver–mounted photograph of ಕಮಲು and throws it at her. She catches it deftly and exits]

ಯಜಮಾನ್ರು

(Sipping his coffee slowly and appreciatingly)

ಹ್ಯಾಗಿದೆ ಕಾಫಿ….ಸುಬ್ಬೂ?

ಗಂಡ

ಚೆನ್ನಾಗಿದೆ…..?

ಯಜಮಾನ್ರು

(Rising up in a fury) "ಚೆನ್ನಾಗಿದೆ" be damned, you fool! It is the best coffee in the state! She is the best coffee maker in the worldoo!

ಗಂಡ

ಮತ್ತೆ……..? ಈ ಕೈಯಣ್ಣೆ ……. ಗಿಯ್ಯೆಣ್ಣೆ……..?

ಯಜಮಾನ್ರು

(ಭೃಕುಟರಚನೆ ಮಾಡುತ್ತಾ Approaching ಗಂಡ)

That is the secretoo! Domestic happinessಗೇ....dead secretoo. ಮನೆಯಲ್ಲಿ ಒಂದು ಸಾರ್ತಿ ನಾಲ್ಗೇತಪ್ಪಿ "Satisfacturry" ಅಂದು ಬಿಟ್ಟೆಯೋ, nothing will come up to the markoo, afterwards! In my house, Iam always happy because I am always miserable, or I take care to be miserable !!

ಈಗ ಅರ್ಥವಾಯ್ತೇ....ನಿನ್ನ dull brainಗೆ... how to rule a house!—ruleroo! (ಗೆರೆಹಾಕುತ್ತಾ demonstrating) ಹೀಗಲ್ಲಾ ಹೀಗೆ!...... (ಮುಷ್ಟಿಯಿಂದ ಹೊಡೆಯುವ ಹಾಗೆ ತೋರಿಸುತ್ತಾ) home...ruleroo!!! ಹಿಡಿಯೋದು horizontaloo but works verticaloo! That...is the secret! resultoo, night and morning ಒಂದೇ ಜಪ!! "ಗಂಡ... ಗಂಡ........ ಗಂಡ"... ಗಂಡನ ಬೂಟ್ಸೂ.......ಗಂಡನ shoesoo... ಗಂಡನ ಕಾಫಿ...ಗಂಡನ socksoo! Now, that, my dear boy, is the one creature in the world........ ನಿನ್ನ horrible wifeಗೆ...ಕ್ಷಮ್ಸು dear boy...you know I love you though I hate your gutlessness........ like Seetha ಉಪದೇಶಾಡ್ ಶೂರ್ಪನಖಿ....or ತಾಟಕೀ... never mind........ whatever ರಾಕ್ಷಸೀ it was...... You see what I mean! ಆ!? [ಎನ್ನುತ್ತ ಕಾಫಿ ತಂದ ಪಾತ್ರೆಗಳನ್ನು ಎತ್ತಿಕೊಂಡು ಒಳಗೆ ಹೋಗುತ್ತಿರುವಷ್ಟರಲ್ಲಿ ಬಾಗಿಲ ಹಿಂದೆ ಅಲ್ಲಿಯೇ ಕಾದು ನಿಂತಿದ್ದ ಕಮಲುವು ಮುಂದೆ ಬಂದು ಪಾತ್ರೆಗಳನ್ನು ಅವನ ಕೈಯಿಂದ ತೆಗೆದುಕೊಂಡು ಹೋಗುವಳು]

ಗಂಡ

(ಸ್ವಗತ) She was in here all the time! ಆಹ್!

[with a glint in his eyes—aloud]

ಒಪ್ದೆ! ನರಸಿಂಹ್! You are quite right. It is imperative that our better halfs should meet to better their their own worse-halfsoo. "When shall we foregather on the morrow?", all together ?, two-gether ಏನೂ!? four-getheroo?! ಯಾವಾಗ ಬರ್ತೀರಿ……tomorrow?

ಯಜಮಾನ್ರು

ಯಾವಾಗಲೇನೂ…? Shall consult (Cಗೆ ಹೋಗಿ ವಾಪಸು ಬಂದು)…….consult be damned. ಅವಳ formula as per usual: "ನೀವು ಹೇಳಿದ ಹಾಗೆ"! Therefore Teatimeಗೆ ಬಂದು ಸೇರ್ತೇವೆ dear boy!….tomorrow…ತೇವೆ ಏನೂ …."ತ್ತೇನೆ!" with my wifeಉ….a distinctionoo….with a differenceoo…..ಅರ್ಥವೇ?

ಗಂಡ

ಟೀ ಟೈಮೂ, ಅಂದ್ರೆ?…. and at the same timeoo ನನಗೀಗ ಕಾಫೀ ಕುಡಿಸಿಬಿಟ್ಟು?! ನೋಡು dear boy! ಈವತ್ತಿನ Tea-timeಗೆ ಕಾಫೀ ಕುಡಿಸ್ಸೀಯಾ, ನಂಗೆ, ನಿಮ್ಮನೇಲಿ;! ನಾಳೆ ನಮ್ಮ ಮನೇಲಿ ನನ್ನ ಕಾಫಿ ಟೈಮ್ನ Tea-time ಅಂತೀಯ! Therefore let us compromise!

ಯಜಮಾನ್ರು

Compromise be damned! Tea timeoo ಬೇಡ, ಕಾಫೀನೂ ಬೇಡ.......what do you say for Cocoa time...?....I mean 4'o clock....?

ಗಂಡ

4'o-clock ಏ?....coffee time ನನಗೆ—Cocoa time really, for my wife and guestsoo—milk timeoo for my baby and Tigeroo! So, 4'o'clockಗೆ ಬಂದ್ಬಿಡಿ........sorry! for the goodisoo !- I mean........ ಬಂದ್‌ಬಿಡು - with your appurtenance...... or is it affianced?........... ಎರಡೂ ಒಂದೇನೇ....?

ಯಜಮಾನ್ರು

ಒಂದೇನೇ be damned! ಈ tigeroo ಅಂದ್ಯೆಲ್ಲಾ.....what is it?

ಗಂಡ

Come tomorrow and see... and find out........ Good Night Narsim.

[Exeunt Right briskly]

ಯಜಮಾನ್ರು

ನಾನೂ, ನನ್ನ wifeoo, gutless Subboo, ಅವನ terrible wifeoo, ಮಧ್ಯದಲ್ಲಿ ಅವನ poor baby... ಅರ್ಥವಾಯ್ತು : but ಈ ನಮ್ಮ ನಮ್ಮ ಸಂಧೀಲಿ ಸಮಾರಾಧನೇಗೆ ಕಾದಿರೋ "tiger" ಯಾವ್ದೂ..........ಆ?......[ನಿಟ್ಟುಸಿರಿಡುತ್ತ] ಸುಬ್ಬು ಹೇಳಿದ ಹಾಗೆ "Can find out tomorrow", and must remember that tiger or no tiger, my name is ನರಸಿಂಹಯ್ಯ ನರ ಇರೋ ಸಿಂಹಕ್ಕೆ ಅಯ್ಯ! ಅದರ ಅಪ್ಪ!

ಲೇ!!!! ಎಲ್ಲಿದೀಯಾ!!

ಕಮಲು

ಆಗಿನಿಂದ ಇಲ್ಲೇ ಇದೇನೆ. ನೀವು ಮುಂದೆ ಕೇಳೋದು ಗೊತ್ತು. ಕಿರ್ಲ್ಬೇಡಿ, ಮುಂದೆ ಗಾನ ಕಿರ್ಲಿದರೋ..... ಈಗತಾನೇ ನಿದ್ದೆ ಹೋಗ್ತಿರೋ baby ಎದ್ದುಬಿಡ್ತೋ.... ರಾತ್ರೆಯೆಲ್ಲಾ ಕಿರ್ಲಾಟಃ ನಿಮಗೆ ನಿದ್ರೇನೇ ಇಲ್ಲ!.... ಭದ್ರ!.... ಗಲಾಟೆ ಮಾಡದೆ ತೆಪ್ಪನೆ ಅಡಿಗೆ ಮನೆಗೆ ಬಂದು ತಿಂದುಬಿಟ್ಟು ಹೋಗೋದು ಮೇಲು! ಇಲ್ಲಾ! ಯಥಾಪ್ರಕಾರ ಇಷ್ಟೊತ್ತಿನಲ್ಲಿ ಎಲ್ಲರನ್ನೂ ಬೆದರಿಸಿ ಗದರಿಸಿದ್ರೋ.... ನಿಮ್ಮ baby ಎದ್ದ ಕಿರ್ಲಾಟದಲ್ಲಿ....ನಿದ್ದೆಗೆಟ್ಟು.....ಬೆಳಗ್ಗೆ.... Inspection.... ಅಂತಿದ್ರಿ.....?

ಯಜಮಾನ್ರು

(In whispering husky notes)

ಎಲ್ಲಾ ಗೊತ್ತೇ! That is alright. ದಮ್ಮಯ್ಯ! ಆ ಹಾಳು ಬೇಬೀನ ತೂಗ್ತಿರು.

[Exit Kamalu]

[ನರಸಿಂಹಯ್ಯನು ತನ್ನ ಬಟ್ಟೆಗಳನ್ನು ಒಂದೊಂದಾಗಿ ಕಿತ್ತೆಸೆದು ಧೋತ್ರವನ್ನುಟ್ಟುಕೊಳ್ಳುತ್ತ]

Baby be damned! ನನಗೇನೊ;! ಮನೆಗಳಲ್ಲಿ ಕೂಸುಗಳು ಹುಟ್ಟಿದ್ರೆ cradles ಅಲ್ಲ ಕೊಂಡ್ಕೊಳ್ಳ ಬೇಕಾದ್ದು.... Chloroformoo. ಲೇ! [Exit slowly C]

[ಫರದೆಯು ಬೀಳುವುದು]

Scene IV

[ಗಂಡ, at the stove shaking a feeding bottle ಅಮ್ಮಾವ್ರು about to go out.]

ಗಂಡ

ಸ್ವಲ್ಪಿರು dear! ಎಲ್ಹೋಗ್ತೀಯಾ?

ಅಮ್ಮಾವ್ರು

ಇದೇನಿದು ಹೊರೊಡೋವಾಗ?

ಗಂಡ

(with a smile) ನನಗ್ಗೊತ್ತು……. ನಿಮ್ಮ father, motherಗೆ ಇದ್ದಹಾಗೆ. ಈ brahmin orthodoxy ಎಲ್ಲಾ ದ್ರೂ ನಿನ್ನ blood ನಲ್ಲೋ ಇಲ್ಲಾ bones marrowದಲ್ಲಾದ್ರೂನೋ ಅವಿತುಕೊಂಡಿರುತ್ತೇಂತ…ಗೊತ್ತೂ ನನಗೆ……..!

ಅಮ್ಮಾವ್ರು

(indignantly) Ortho!…….. ಹೌದು…….ನಾನು and I think you also. But this adventitious "doxoo"!, ನಾನಲ್ಲ! perhaps…….. ನೀವು!

ಗಂಡ

ಅಲ್ಲಾ…….. ಹೊರಡೋವಾಗ ಎಲ್ಲೀಗೇಂತ ಕೇಳಿದ್ರೆ ಅಪಶಕನಾಂತ….ಒಂದ್ವೇಳೆ…. ನಿನಗೆ ತೋಚಿದ ಹಾಗೂ….ಅದರ ಮೇಲೆ ನೀನು ಕೇಳಿದ್ದಾಗೆ ಅರ್ಥ ಇಟ್ಕೊಂಡು….ನಾನೂ….ಹೇಳಿದ್ದೂ…….but ನೀನು ಹೇಳಿದ್ದು

correctoo dear! Ortho!—but ಈ doxಊ ಬಾಬತ್ತು ನನಗೇನೋ para-doxಊ!! But yet, ನಾನು ಬದುಕಿರೋದೂ for just one pair of dear "ducksoo"! ಮಗೂಗೆ dinner houroo; therefore ನಿನ್ನ ಹೋಗ್ ಬೇಡಾ ಅಂದೆನೋ, ಶಾಸ್ತ್ರಕ್ಕೆ ವಿರುದ್ಧ ; ಮಾಗಾ "ಇತಿ ಅಮಂಗಳಂ"! But yet "ಅಂಮ್ಮಾ ಇತಿ catastrophicoo" ನೀನಿಲ್ಲದಿದ್ದರೆ; ನೀನು ಹೊರಟ್ಹೋಗೋದು, Society calls you—ಇಲ್ಲಿ brutish ನಾನು and bruteletish ಇವನು………… both hungry…….one cardiacally and the other gastrically!ಇದಕ್ಕೆ….anti…..ven….ಅಲ್ಲ…….anti……..nectaroo….

ಅಮ್ಮಾವ್ರು

ಈ antiಗೆಲ್ಲಾ ಒಂದೇ, ಓಷಧಿ! Atkinson's nippleoo……feeding bottleoo………… ದೇವೇರೀಗೆ ಗೊತ್ತು…….. bottleಗೆ contentsoo ಕಾಸ್ದ milkoo ದೇವೇರಿ ತೋರಿಸ್ತಾಳೇ……….. so the brutelet's hungeroo ತೀರುತ್ತೆ……..but considering you are a partner also in brutelet……..ದಯವಿಟ್ಟು diarrhoea etcನ eliminate ಮಾಡೋಕೆ, cleanliness pauperises physicians ಅಂಬೋದ್ನ………

ಗಂಡ

ಹೌದೂ !? ಈಗ ನೀನು ಹೋಗ್ತಿರೋದು….Lectureoo…..what I mean is……what a great loss you are to….

ಅಮ್ಮಾವ್ರು

Cut out your compliments!!

ಗಂಡ

Quite so!.......

ಅಮ್ಮಾವ್ರು

I know what you mean!

ಗಂಡ

(ಮೂಲೆಯಲ್ಲಿದ್ದ parasolನ್ನು, ಬಿಚ್ಚಿ ಅಮ್ಮಾವ್ರ ಕೈಗೆ ಕೊಡುತ್ತ) I know that you know what I mean which means also that you also know what we both meanoo; but in this meanwhileಊ, in short....... ಈ little brute ಇರೋವರೀಗೂ we are both supplementary from my angle of view..... not complimentary to you of course........ but then two brutes!........ I mean one decimal something........ I mean everything—....to me, meaning.......us..... which reminds.......me; ದಮ್ಮಯ್ಯಾ dear!...... audience waitingoo! Disappear dear!; but, ನಿನಗೋ brain terribleoo! ನನಗೋ memory........forgive mefor reminding you!......

[Fixing up the leather attachments of a parasol and a chateline about ಅಮ್ಮಾವ್ರು's lily fingered hand and wrist]....... audience firstoo........ the rest nextoo. Dog - cart harnessedoo; Tigeroo ಪಕ್ಕದಲ್ಲೇ ಕೂತಿಧೆ. ತಿರುಗಿ ಬರೋದು late ಆದ್ರೆ ಲಾಂದ್ರಾs all right......Match-boxoo ಕಂಚಿ-case ಪಕ್ಕದಲ್ಲಿ......

[The two disappear—Exit L —Curtain.]

Scene V

[Setting, as before, but the following afternoon Discovered: ಅಮ್ಮಾವ್ರು and ಗಂಡ at a table]

ಅಮ್ಮಾವ್ರು

ಇದೇನು revolutionoo? tea-timeಲಿ ಕೂಡ I must have coffee ಅಂತಿದ್ದ ನೀವೂ…….ಯಾಕೀ sudden switching off to ಕೋ ಕೋ?

ಗಂಡ

ಕ್ಷಮ್ಸು dear! ನಿನಗೆ ಕೋಕೋ... ನನಗ್ ಕಾಫಿ….cow's milkಗಿಂತ condensed milkoo….ನಮ್ಮ bruteletಗೆ…..ಹೀಗೇ ನಮ್ಮ ನಮ್ಮ tasteಗಳೂ. But then, dear, ನಾವು ಮೂವರೂ, we three including Tiger, are subservient slavesoo to our self-invited guestoo…….. I should say guestsoo….I really should say…my guestoo….to whom I am a hostoo….as well as your guestessಉ to whom you are a hostess…….. ಅದೇನೋ ಕಾಣೆ!….. ನಿನ್ನ guestess ಅಲ್ಲ……. but her husband……..could have understood…… if he were a woman and Enciente…….. ಅವನಿಗೇನೋ…. ಒಂದು ಕೇಸರಿಕೆ……. for ಕೋ ಕೋ!! He is hopelessoo; successful in everything except being a husbandoo….wifeಓ cock-peckedoo….

ಅಮ್ಮಾವ್ರು

(ಬಿರುಸಾಗಿ, ದುರುಗುಟ್ಟು ತ್ತ)

Go on! ನಿಮ್ಮ ನಿಮ್ಮಲ್ಲಿ ……. ನೀವು MENಉಗ್ಳು behind each other's backs…….. ಎಷ್ಟು ಬೇಕಾದರೂ bite ಮಾಡಿಕೊಳ್ಳೀ….. but…….your guest's wifeಉ…….. my guestessoo ಅಂದ್ರಲ್ಲಾ……. horrible englishoo—but go on…….. and take care to go on carefully!! ಯಾರು? ಇವರು?

ಗಂಡ

ನಮ್ಮ Narasimoo! my old crony…….

ಅಮ್ಮಾವ್ರು

ಆ pig ಏ…? ಯಾಕೆ ಕರೆದ್ರಿ ಅವನ್ನ ನನ್ನ ಕೇಳದೇನೆ….?Equal rights ಅಲ್ಲವೇ ಇಲ್ಲೀ?!

ಗಂಡ

ಹೇಳಿದ್ನೆಲ್ಲಾ ಮೊದಲೇ….self invitedoo ಆಂತ!… ಅಲ್ದೆ ಅವನೊಬ್ಬನೇ ಅಲ್ಲ…

ಅಮ್ಮಾವ್ರು

ಏನು, ನಿಮ್ಮ ಸ್ನೇಹಿತರ ಕೊಂಪೇನೀ ಬಂದು ಸೇರುತ್ತಯೋ ಇಲ್ಲೀ?…

ಗಂಡ

ಇಲ್ಲವಲ್ಲಾ !….ಹೇಳ್ತಿದೇನಲ್ಲ… ಅವನೂ ಅವನ sweet wifeoo….ಅಷ್ಟೆ.

ಅಮ್ಮಾವ್ರು

ಓ! I see! ಅವಳನ್ನ ಕರ್‌ಕೊಂಬರ್ತಾನೆಯೇ! ಬರ್‌ಲಿ! ಅವಳನ್ನ ಕರ್ಕೊಂಡ್ ಬರೋದೂ Godsendoo! ಅಬ್ಬಬ್ಬಬ್ಬ ! ಏನು brutalise ಮಾಡ್‌ತ್ತಾನೇಂತೀರಾ ಅವಳ್ನ….? ಬರಲಿ! I will kick ಕಮಲು and kill that pigoo…widow or no widow…….!….ಇಲ್ರೀ?? ಕೋಕೋ ಏನ್ ಬಂತೂ…to that fat…hogoo ?

ಗಂಡ

ಹಾಗೂ……. ಹೀಗೂ two guestsoo. Up to us bothoo…….. ಬಂದೋವರ್ನ kickingoo, killingoo widowing or widowering, ಈ ನಿನ್ನ—righteous of course—-indignation ನ curb ಮಾಡ್ಕೊಂಡು……."ಏನೋ, ಪಾಪ! ಬಂದಿಧಾರೆ…….. ಕೋ ಕೋ ಕುಡೀತಾರೆ….. ಬಂದ್ಹಾಗೇ ಹೊರಟ್ಹೋಗ್ತಾರೆ" ಅಂಬೋ idea betterಏ, ಇಲ್ಲೊ ಈ killing and kicking……..? I shall help of course….ನನ್ನ football bootsಊ!……killing ಬಾಬ್ತೂ……..Tiger's departmentಊ!…… ನನಗೆ ಒಂದೇ objectionoo…….ಕಿಲ್ದೆ carpet dark colour bestoo ಅಂತ… but you of course……..

ಅಮ್ಮಾವ್ರ

Pointಗೆ ಬನ್ನಿ!

ಗಂಡ

ಏನೂ ಇಲ್ಲ! Proposed bloodshedoo........ ruined carpetoo....corpses to explainoo. ಕ್ಷಮ್ಸು dear! ನಿನ್ನ friend ಕಮಲೂನ ಕಿಕ್ ಮಾಡದೇನೂ....... ನನ್ನ friendನ ಕಿಲ್ ಮಾಡದೇಯೂ.......just like.......ನಿನ್ನ greatnessನ ನಾನು appreciate ಮಾಡೋ ಹಾಗೆ ನಿನ್ನ classmate greatnessನ ಆ....pigoo........ hogoo.......appreciate ಮಾಡೋಹಾಗೆ....ನೀನು....!; after all, he is my friendoo!

ಅಮ್ಮಾವ್ರು

But she is also my friendoo! ನಿಮ್ಮ friendಗೆ humane feelingsನ teach ಮಾಡೋಕೆ ನಿಮಗೆ ಶಕ್ತಿ ಇಲ್ಲ್‌ದಿದ್ರೂವೆ, ನನ್ನ friendಗೆ human rightsನ realise ಮಾಡ್ಕೊಳ್ಳೋದ್ನ ಹೇಳ್ಕೊಡೋ ಶಕ್ತಿ ನನಗಿದೆ! ಬರ್ಲಿ! ಆ bruteoo! The Lord hath delivered him into mine hands!!

ಗಂಡ

ಹೌದೂ dear! but......only to construe and construct........ perhaps........ reconstruct....their homeoo........without of course.....ನಿನ್ನ್ kicking....killing....ಆವೇಶದಲ್ಲಿ.......destructoo......our little home........

ಅಮ್ಮಾವ್ರು

sssssಸ್ಟ್ ! Rest assured ! ಬಾಕ್ಲು....... ಬಂದರು !! ಕಮಲೂಗಿಲ್ಲದ gutsoo ನಾನು inject ಮಾಡ್ತೇನೆ. ಆ pigಗೆ ಇರೋ fatನ ನೀವು ಕರಗಿಸಿಬಿಡಿ...ಹ್ಯಾಗೇ ?

ಗಂಡ

ನೀನು ಹೇಳಿದ ಹಾಗೆ!

[Bang;-at the door -]

(ದೇವೇರಿ-ಪ್ರವೇಶಿಸಿ)

ಯಾರೋ ಬಂದವ್ರೆ... ಬರ್ತವ್ರೆ. ಬೆಂದ್ಯೈತೆ, ಕುದುರೇ ಉಳ್ಳಿ; ಕಟ್ಟಿದ್‌ಮೇಗೇ....ಉಳ್ಳಿ ಸಾರು ನಮ್ಮನೀಗೊಯ್‌ಬೌದೇನ್ರವ್ವಾ.......?

ಅಮ್ಮಾವ್ರು

ನೀನ್ ಹೇಳಿದಹಾಗೇ....ಹಾಳಾಗಿ ಹೋಗು...ಹುರುಳಿ ಸಾರು ಸಮೇತ. ಟೈಗರ್‌ನ ಸರಪಣೀ ಹಾಕೀ ಕಟ್ಟಿ ಬಿಟ್ ಹೋಗೂ....

ಗಂಡ

Quite right, dear! That will stop any killingsoo!

[ದೇವೇರಿ ಹೋಗುವಳು--ನರಸಿಂಹಯ್ಯನ ಪ್ರವೇಶ]

ನರಸಿಂಹಯ್ಯ

(ಗಟ್ಟಿ ಯಾಗಿ) Hallo! Dear boy!

ಅಮ್ಮಾವ್ರು

[Rocking chairನಲ್ಲಿದ್ದು ಅವನ ಕಡೆಯೇ ತಿರುಗದೆ ಸುಬ್ಬುವಿನ ಕಡೆ ತಿರುಗಿ—freezingly]

Roomನಲ್ಲಿ ಒಬ್ಬ lady ಇಧಾಳೆ ಅಂಬೋದ್ನ ಅವ್ರು forget ಮಾಡಿದ್ರೂ, ನೀವು remind ಮಾಡಿ!.......

ಗಂಡ

Quite so! ;........ you see dear boy, there is a lady……

ನರಸಿಂಹಯ್ಯ

Yes! Yes! I know all about it...ಕ್ಷಮ್ಸು ಸುಬ್ಬು, ಈ ಇಂಗ್ಲೀಷ್‌ಗೆಲ್ಲ ಬೆದ್ರೋನಲ್ಲ ನಾನು...leave it to me....... (turns to the lady)ಕ್ಷಮ್ಸು sister........ ನೀನು remember ಮಾಡ್ಕೋಬೇಕು that there is a gentleman and a real man in this room; ಅಲ್ದೆ a real woman........a sweet consoler, confident and companion will be here in a minute with or without your permission........ (turning to door, aloud, to Kamalu) ಬಾರೇವೊಳಗೇ........ಎಷ್ಟೊತ್ತೇ ಅಲ್ಲಿ ನಿಂತಿರೋದು?......

[Enter Narasimhayya's wife - Kamalu]

ಕಮಲು

ಅಲ್ಲ....ನೀವು....ಹೇಳಿದ್ರೀಂತ....... ?

ಅಮ್ಮಾವ್ರು

ನೋಡಿದ್ಯಾ ಕಮಲಾ? just like a brute! ನಿನ್ನ ಅಲ್ಲೇ ನಿಂತಿರೂಂತ ಹೇಳ್ಬಿಟ್ಟು……ಯಾಕ್ನಿಂತೇ ಅಂತ ನಿನ್ನೇ ಬಯ್ಯುತ್ತೆ….. just like a manಉ....bruteoo.......puts the blame on the womanoo!!

ಗಂಡ

ನೋಡಿದ್ಯಾ dear boy!.......I told you......!

ನರಸಿಂಹಯ್ಯ

Shutt up! If you have not the right spirit, I have! (to ಅಮ್ಮಾವ್ರು) ಏನ್ ನೀವು ಹೇಳಿದ್ದು?

ಅಮ್ಮಾವ್ರು

ಇದೊಂದು peculiarity ಕಮಲಾ............ ಗಂಡಸ್ರ brainಉ........ ಕಿವೀಲಿ ಬಿದ್ದದ್ದು brainಗೆ ಸೇರೋ ಅಷ್ಟ್ರಲ್ಲಿ ಮೂರ್ಸರ್ತಿಯಾದ್ರೂ ಕಿರಲ್ಬೇಕು....... ಇದೇ man's wonderful brainಉ ಅನ್ನೋದು....... manಉ....! the Lord of Creationಉ!!

ಗಂಡ

ನೋಡಿದ್ಯಾ dear boy !..........in cross-talkಉ....she is terribleಉ........

ನರಸಿಂಹಯ್ಯ

(With a wry face and hushed tone) All right! All right! I shall see that everything is alright!.......

ಅಮ್ಮಾವ್ರು

Everything is alright!, everything ಅಲ್ಲ... almost everythingಉ........ there is one thing in this room that is not alright........ and that is yourself........!

ನರಸಿಂಹಯ್ಯ

ಹ್ಯಾಗೆ ನಾನು alright ಅಲ್ಲ? at least.......I don't want to speak to you.......ಸುಬ್ಬು.......I appeal to you.......I......what is wrong with me.....?

ಗಂಡ

Wrong with you!... ಏನೋಪ್ಪ. I mean…….you see what I mean....!

ನರಸಿಂಹಯ್ಯ

I don't see what you meanಉ........!

ಅಮ್ಮಾವ್ರು

Mean!........ I shall explain! ಇಲ್ನೋಡಿ! ಆ ದೀಪ ತಗೊಂಬ್ಬನ್ನೀಂದ್ರೆ.......

ಗಂಡ

Certainly dear!........

(ಹಾಗೆಯೇ ನಟಿಸುವನು)

ಅಮ್ಮಾವ್ರು

(ಕಮಲು ಮುಖವನ್ನು ಎತ್ತಿ ಹಿಡಿದು) ಈ ಪ್ರೇತದ ಮುಖ ನೋಡಿದ್ರಾ?.... ನನಗಿಂತ ಮೂರು ವರ್ಷ ಚಿಕ್ಕೋಳು.... two classes higherಉ..........ಹೀಗಿದ್ದ ರತೀನ ಈ ಸ್ಥಿತೀಗೆ ತಂದಿಟ್ಟೇದೀರಲ್ಲ........!? 30 ವಯಸ್ಸು ಕೂಡ ಇಲ್ಲ.......ಆಗ್ಲೆ ಏಳು

ಮಕ್ಕ ತಾಯಿ........ ನಿಮ್ಮ ayah....ಕಸಾಗುಡ್ಸೋಳು....cookಉ........ಮೂರು ವರ್ಷದಿಂದ ಇದೇ ಸೀರೆ ಹರಕ್ಲು......ಸಂಬ್ಳನೆಲ್ಲ ನುಂಗೋದು ನೀವು.......ದುಡಿಯೋಕೆ ಅವ್ಳು......?

ನರಸಿಂಹಯ್ಯ

My God.......! This is too much!

ಗಂಡ

I told you my dear boy........!

ಕಮಲು

ಛೆ! ಸುಮ್ನಿರು ಸರೋಜ...........ಏನ್ಹೇಳಿದ್ರೂ ಗಂಡಸ್ರು ಗಂಡಸ್ರೇ.......

ಅಮ್ಮಾವ್ರು

Shutt up! ನಿನ್ನ ಗಂಡ ಹೇಳಿದ್ಹಾಗೇ.......If you have not the right spirit, I have............ ಎಷ್ಟು ದಿನಾಂತ ತಡ್ಕೊಂಡಿರೋದು ನೀನು ಈ tyrannyನ........ ?

ಕಮಲು

ಏನೋ ಸರೋಜ! ಕೈ ಹಿಡಿದ್ಮೇಲೆ ತಪ್ಪಿಸ್ಕೊಳ್ಳೋದೆಲ್ಲಿ....?

ಅಮ್ಮಾವ್ರು

ಚೆನ್ನಾಗಿದೆ! ಕಸಾಬಾ ಕುರೀನ ಕೊಲ್ಲೋಕೆಳಕೊಂಡ್ಹೋಗ್ತಿದ್ದಾಗ, ಅದ್ರ ಕೈಲಿ ಕತ್ತೀನ ಕೊಟ್ಟು, ಕುತ್ಗೇಗೆ ಕಟ್ಟಿರೋ ಹಗ್ಗಾನ ಕತ್ತರ್ಸ್ಕೊಂಡು free ಆಗಿ ಓಡು ಅಂದ್ರೆ.........."ಕಸಾಬನ ಕೈ ಹಿಡ್ದಿದ್ದೇನೆ" ಅಂತಂತೆ. ಆ ಕುರೀಗೂ ನಿನ್ಗೂ ಏನು ವ್ಯತ್ಯಾಸ?

ಕಮಲು

ಈಗೇನು ಅಂಥಾ ಕತ್ತಿ ಕೊಟ್ಟಿರೋದು ನೀನು ನನ್ಕೈಲಿ?

ಅಮ್ಮಾವ್ರು

ಕೊಡ್ತೇನೆ! ನಾಳೆ ಮೀಟಿಂಗ್ attend ಮಾಡು.......ಇದೇ questions ನಮ್ಮ associationನಲ್ಲಿ....... ನನ್ನ lecturesಉ; "How to convert husband tyrants into home companions" subjectಉ.....ಬರ್ತೀಯಾ? (ಕಮಲು hesitates) ಇಲ್ಲ ಹೆದರ್ಕೊಂಡು ಹಾಳಾಗ್ಹೋಗ್ತಿಯಾ? Remember, for the sake of your childrenಉ, ಆ bruteನ ಒಂದು human being ಆಗಿ ಮಾಡಿ, ನಿನ್ನ ಮಕ್ಕಳಿಗೆ ಒಬ್ಬ fatherನ ಕೊಡೋದು ನಿನ್ನ duty.......duty...... ಬರ್ತೀಯಾ?

ನರಸಿಂಹಯ್ಯ

ನಿನ್ meeting........I mean ನಿಮ್ meetingಉ......I mean hang it............your meetingಉ! She shall not attend any of your meetingsಉ ಸತ್ತೂ ಬರೋದಿಲ್ಲಾ, ನಿಮ್ meetingಗೇ! (to Kamalu) ಏನೇ?

ಕಮಲು

ನೀವು ಹೇಳಿದ ಹಾಗೆ!

ನರಸಿಂಹಯ್ಯ

There is your answer for you…..what do you say Subbu?

ಗಂಡ

I won't say anything just yet, dear boy…..

ಅಮ್ಮಾವ್ರು

But it is not her answerಉ........ ಅವಳ್ನ brutalise ಮಾಡಿದ. horrorನ answerನ voice ಮಾಡೋ gramaphoneನೇ ಹೊರ್ತು ಅವ್ಳು, ಅವಳೊಂದು free being ಆಗಿ ಹೇಳಿದ answer ಅಲ್ಲ ಅದು.......you horrible husbands ಎಲ್ಲಾ ಹೀಗೇ... wifeಉ ಅಂದ್ರೆ....ನಿಮ್ಮ wifeಉ....ನಿಮ್ಮ wifeಉ ಅಂತ ಒಡ್ಕೋತೀರೇ ಹೊರ್ತು, ನೀವು ಮದ್ವೆ ಮಾಡ್ಕೊಂಡ body ಅಲ್ದೆ, ನೀವು ಮದ್ವೆ ಮಾಡ್ಕೊಳ್ಳದ ವೊಂದು........ free beautiful independent soaring soul........ ನಿಮಗೆ ಹ್ಯಾಗೊಂದು soul ಇದೆಯೋ ಹಾಗೇ ಅವಳಿಗೂ ಇಧೇ ಆಂತ ನಿಮಗೆಲ್ಲಿ ತೋಚುತ್ತೆ!?

ಕಮಲು

(Caressing and stroking Saroja's hand)

ಅಯ್ಯೋ! ಸುಮ್ನಿರು ಸರೋಜ.......

ಅಮ್ಮಾವ್ರು

(Excited, pushing Kamalu away)

ಸುಮ್ನಿರು!? I won't ಸುಮ್ನಿರು….ಆ bruteನ….I mean….ನಿನ್ನ husbandನ….continued brutal treatmentನಿಂದ ನಿನ್ನ mind slavish ಆದಾಕ್ಷಣವೇ, ನನ್ನ mindಊನೂ ಹಾಗೇಂತ ತಿಳ್ಕೊಂಡ್ಯಾ?…..I shall speak out my mind to this… this……..what shall I call it…….. this THINGಉ!…..

ನರಸಿಂಹಯ್ಯ

Thingಊ?…….. ನಾನು thingಉ?….ಸುಬ್ಬೂ……..what thingಉ does she mean ಉ…….?

ಗಂಡ

I can't say dear boy, what thingಉ……but after all somethingಉ……..why? Any thingಉ is……. is betterಉ….than……..Nothingಉ!……..

ಅಮ್ಮಾವ್ರು

Nothingಉ? He is less than nothingಉ.

ನರಸಿಂಹಯ್ಯ

Less than nothingಉ! Subbu!?

[Waves his hands and arms helplessly towards Subbu.]

ಗಂಡ

(Dispassionately and stroking)

I admit it dear boy… less than nothingಉ is really too badಉ.

ನರಸಿಂಹಯ್ಯ

What does she meanಉ ?

ಅಮ್ಮಾವ್ರು

ಅವರನ್ನೇನ್ಕೇಳ್ತೀರಾ…….ನನ್ನ ಕೇಳಿ……I shall tell you what I meanಉ……..you……you……ಮೊಸಳೆ…

ನರಸಿಂಹಯ್ಯ

ಮೊಸಳೆ…….I……..Subbu!

[Subbu drops his hands helplessly and turns away]

ಅಮ್ಮಾವ್ರು

Brainsನಲ್ಲಿ, looksನಲ್ಲಿ, heartನಲ್ಲಿ ನನಗಿಂತ worlds ahead ಆಗಿರೋ ಇವಳ್ನ "ನೀವ್ ಹೇಳಿದ ಹಾಗೇ" ಅಂತ ಆನ್ನೋ ಸ್ಥಿತೀಗೆ ತಂದಿಟ್ಟೇಧೀರಲ್ಲಾ! ನೀವು human beingಏ?….Pig….pig….you are a pig…pig…..ಪ್ಹಿಗೂ……..

ನರಸಿಂಹಯ್ಯ

Pigಉ....ನಾನು!....... dear boy....this is too much!........ Did you invite me and my honoured wifeಉ, to this houseಉ, to be insulted like thisಉ?

ಅಮ್ಮಾವ್ರು

Invite you!........ ಇನ್ನು ಸುಳ್ಳು ಬೇರೆ...... Self-invitedಉ ಅಂತ ಮೊದಲೇ ಹೇಳಿಧಾರೆ ನಿಮ್ಮನ್ನ!.......

ಗಂಡ

ಅವಳು quite right .... dear boy........ನೀನೇ ಹೇಳ್ಳಿಲ್ವೇ, "I will drop in at tea time" ಅಂತ.....ಆ ಮೇಲೆ cocoa time ಅಂತ amend ಮಾಡ್ಲಿಲ್ವೆ?......of course........between you and me, to remind you of that is uncharitableಉ.....

ನರಸಿಂಹಯ್ಯ

Granted........ granted…….granted;…… but is it charitableಉ to call mea pigಉ? I understand you dear boy! Women have no brainsಉ........ no senseಉ........ ಬರೀ bundle of nervesಉ........ for instanceಉ........ she calls me!...me!...a gentleman!........a pigಉ..... the idea!!!! Subbu, do I look like a pigಉ?

ಗಂಡ

(Running his eyes over Narasimhayya—cap-a-pie) ನಾನೇ think ಮಾಡಿ ಏನ್ ಪ್ರಯೋಜ್ನ?.....dear boy.......opinions always differಉ ಆದ್ರೂ pigಆದ್ರೆ ತಾನೇ ಏನು........ಮಹಾವಿಷ್ಣು ಕೂಡ..........but I think........

ನರಸಿಂಹಯ್ಯ

It is nothing to me what you thinkಉ....but, I shall not have my wife...my sweet wife....contaminating herself in your house!ಉ....ಇನ್ನೊಂದು ಕ್ಷಣ ನನ್ನ wife ಈ ಮನೇಲಿದ್ರೆ, ಅವಳ್ಗೂ ಈ horrible independent spiritಉ ಅಂಟ್ಕೊಂಡ್ ಬಿಟ್ಟೀತು!!....

ಅಮ್ಮಾವ್ರು

ಹುಂ! ಅದೇ ಹೆದರ್ಕೆ ನಿಮ್ಗೆಲ್ಲಾ.... ಈ independent spirit ಯಾವಾಗ, ನಿಮ್ಮ enslaved wivesಗೆ ಬರುತ್ತೋ ಆವಾಗ, ನಿಮ್ಮ tyrannyಗೆ ತುಂಡು ಬೀಳುತ್ತೇಂತ ಗೊತ್ತು ನಿಮ್ಗೆ...ಎಳಕೊಂಡ್ಹೋಗಿ!....I have done my best.......ಅವ್ಳ will hopelessly weak ಆದ್ಮೇಲೆ. ನಾನೇನ್ಮಾಡೋಕಾಗುತ್ತೆ.....ಆದ್ರೆ ವೊಂದ್ಮಾತ್ ಹೇಳ್ತೇನೆ...

ನರಸಿಂಹಯ್ಯ

ವೊಂದ್ಮಾತು!...dozen ಗೆ. ಇಪ್ಪತ್ತೆರಡು ಮಾತಾಡೋ ನಿಮ್ ಕೈಲಿ ವೊಂದು ಮಾತಾಡೋಕಾಗೋದಿಲ್ಲ....... ಇದೆಲ್ಲ ಕೇಳ್ಕೊಂಡಿರೋಕೆ, ನಂಗೆ ಬಿಡ್ವೂ ಇಲ್ಲ....... ಕೇಳ್ಕೊಂಡಿರಬೇಕೂಂತ ನನ್ಹಣೇಲಿ ಬರೀಲೂ ಇಲ್ಲ....... ಆದ್ರೆ ನೀವಾಡೋ ಮಾತುಗಳನ್ನೆಲ್ಲ...ಹಗ್ಲೂ ರಾತ್ರಿ ಕೇಳ್ತಾ.......manlinessನ ಮರೀತಾ, ನಿಮ್ ಕೈಲಿ ಸಿಕ್ಕಿದ, drivelling fool ಒಬ್ಬನಿಧಾನಲ್ಲಾ....... my poor witless.....gutless

friendಉ....though God knows I love him...ಅವನ್ಹತ್ರ finish ಮಾಡ್ಕೊಳ್ಳಿ....ನಿಮ್ಮ lectureನ....

ಅಮ್ಮಾವ್ರು

Shut up! Beast! ನೀವಿರೋ ಯೋಗ್ತೇಗೆ ಇವರ್ನ ಬೈಬೇಕೆ?...He at least, is human!....whatever; he is or is not, he doesn't spend all his honest earnings in his own luxuries....all his time in his club........ leaving me....like you do your wifeಉ,....hopeless and helpless to play ayah to your seven children and food-supplierಉ to that horrible ಬೊಜ್ಜೆ of yours!!

ನರಸಿಂಹಯ್ಯ

(Puts his hands over his, stomach)

ಬೊಜ್ಜೆ!

ಅಮ್ಮಾವ್ರು

ನನಗೇನು ಗೊತ್ತಿಲ್ಲಾಂತ ತಿಳ್ಕೊಂಡ್ರಾ ನಿಮ್ ಚರಿತ್ರೆ? ನಿಮ್ ಹಾಳು 500 ರೂಪಾಯಿ ಸಂಬ್ಳದಲ್ಲಿ ವಂದ್ಕಾಸೂ ಕೂಡ ಮನೆ ಖರ್ಚಿಗೆ ಕೊಡ್ದೆ....clubನಲ್ಲಿ ಕುಡ್ದು ಬಿಟ್ಟು....wifeನ brutalise ಮಾಡೋ ನಿಮ್ಮನ್ನೋಡಿ....ಕೇರಿ ಕೇರೀನೂ ಕಿರೀತಿಧೆ.....ಹಲ್ಲು ಕಿರೀತಿಧೆ....... ಈ ನಿಮ್ಮ ಹಾಳು ಬೊಜ್ಜೇನ ಸಾಗ್ಸೋಕೆ carಉ!........Victoria!........ ಇನ್ನಿವ್ಳು ಒಂದ್ಹೆಜ್ಜೆ ಹೊರಗ್ಹೋಗ್ಬೇಕೂಂದ್ರೆ...... ಒಂದ್ಜಟ್ಕಾ ಕೂಡ ಇಲ್ಲ....ಹೂ.!...ಎಳ್ಕೊಂಡ್ಹೋಗಿ......ಅವ್ಳು road ಉದ್ದಕ್ಕೂ ಈ ಹರಕ್ಲು ಸೀರೇನೂ

ಸುತ್ಕೊಂಡು, ಬರೀ ಕಾಲ್ನಲ್ಲೆ ನಡಕೊಂಡ್ಹೋಗೋದ್ನ ಊರೆಲ್ಲ ನೋಡಿ, ಪಶ್ಚಾತ್ತಾಪ ಪಡ್ಲಿ……ನಿಮ್ಮನ್ ನೋಡಿ…….. bruteಉ bruteಉ…….. pigಉ pigಉ ಅಂತ ಉಗೀಲಿ!!…..

ನರಸಿಂಹಯ್ಯ

(Swallowing a host of sentences, chokingly)

Look at my positionಉ dear boy !!…

ಅಮ್ಮಾವ್ರು

Your position….ಹೂ!…your position is outside this houseಉ…….ನಿಮ್ಮ wifeಉ ಬೆಣಚಕಲ್ ರೋಡ್‌ಮೇಲೆ ಬರೀ ಕಾಲಲ್ಲಿ walk ಮಾಡಿ bleed ಆಗೋ soleನ ನೋಡಿ ಊರೆಲ್ಲ pity ಮಾಡೋವಾಗ ನಿಮಗ್ಗೊತ್ತಾಗತ್ತೆ ನಿಮ್ಮ possitionಉ!

ನರಸಿಂಹಯ್ಯ

ನನ್ನ wife ನಡ್ಯೋದಿಲ್ಲ…… my car! my Victoria! If I only had them here,….ಒಂದೊಂದ್ರ ಮೇಲೆ ಒಂದೊಂದ್ಕಾಲಿಡ್ಸಿ ಕರ್ಕೊಂಡ್ಹೋಗ್ತಿದ್ದೆ……….ನನ್ನ dear wifeಉ, ನಿಂ ಕಣ್ಣೆದುರ್ಗೆ……If I only had them here!…..thank God! ನನ್ನ brainsಉ ನನ್ನ desert ಮಾಡ್ಲಿಲ್ಲ……a jutka!…Madam!…ನನ್ನ ಈ situationನಲ್ಲಿ, ನನ್ನ wifeಮೇಲೆ ನನಗಿರೋ…,respectಉ, loveಉ, ನಿಮ್ಮ ಕಣ್ಣೆದುರ್ಗೆ ತೋರ್ಸೋ……conveniences ಈಗ ಇಲ್ಲಿದ್ರೂನೂವೆ………ರಾಣಿ…….. like a queen …….queen ಏನು?….Empress ಹಾಗೆ… ಅವಳ್ನ ಕರ್ಕೊಂಡ್ಹೋಗೋಕೆ ರಥ…….. I

mean car........ಇಲ್ದಿದ್ರೂನೂವೆ........ ಅವ್ಳ sweet ಕಾಲು... her beautiful ಪಾದ ಸಮದ್ಹೋಗ್ದಾಗೆ ಒಂದು cheap.....common or garden ಜಟ್ಕಾದಲ್ಲಾದ್ರೂ ಕೂಡುಸ್ಕೊಂಡ್ಹೋಗ್ತೇನೆ.....I shall fly for a jutka forthwith!.......

ಅಮ್ಮಾವ್ರು

Fly! ಹು!......ಆ ಮುಂಭಾರಾನಿಟ್ಕೊಂಡು walk ಮಾಡೋದ್ಕೂಡ impossible ಆಗಿರೋ ಆ impediment ಇರೋವರ್ಗೂ fly!....ಅಂತೆ...fly!....ಇಲ್ಲಿಂದ ವಂದೂವರೆ ಮೈಲಿ ಜಟ್ಕಾ standಗೆ......... ಅಲ್ಲೀಗೋಡ್ಹೋಗೋದ್ರಲ್ಲಿ ಕರಗ್ಹೋಗ್ಬಿಟ್ಟೀತು......ಈ arrangementಉ........

ನರಸಿಂಹಯ್ಯ

Arrangement!....I....an arrangement!....Subbu !!........

ಗಂಡ

Arrangement is a good wordಉ dear boy!

ಅಮ್ಮಾವ್ರು

Brain-wave ಅಂದ್ರಲ್ಲಾ,: ನನ್ನ brain-wave ಸ್ವಲ್ಪ ಕೇಳಿ.....ನಮ್ಮನೆ ಮುಂದೆ roadಮೇಲೆ ಮಲಕ್ಕೊಂಡು roll ಮಾಡಿ....... one and a half revolutionsಉ ನಿಮ್ಮನ್ನ ಉರುಳಿಸ್ಕೊಂಡ್ಹೋಗಿ ಬಿಟ್‌ಬಿಡುತ್ತೆ.......jutka standಗೆ.......circumference ಏನಾಯ್ತು?........ mathematics ನಿನ್ನ speciality ಅಲ್ವೆ ಕಮಲೂ?....Nothing is

useless in this world ಅಂತಾರಲ್ಲ, ಹಾಗೆ ನಿಮ್ಮ fattened battened ಬೊಜ್ಜೇನೂ justify ಮಾಡ್ಕೊಂಡು, ಅದಕ್ಕೂ ಸ್ವಲ್ಪ ಉಪಯೋಗವಿಧೆ ಅಂಬೋದ್ನ ತೋರ್ಸಿ....!

[ಕಮಲುವಿನ ಕೈ ಹಿಡಿದು ಒಳಗೆ ಹೋಗುವಳು]

ನರಸಿಂಹಯ್ಯ

Good God! man! Is she personal do you think?....ಬೊಜ್ಜೆ or no ಬೊಜ್ಜೆ...I shall run for a jutka.

ಗಂಡ

Quite so! dear boy! ಆದ್ರೆ Tigerಉ?

ನರಸಿಂಹಯ್ಯ

What do you mean tigerಉ?....you mean tigressಉ....ಕ್ಷಮ್ಸು...dear boy, ನಾನು ಈ tigressನ..... mean ಈಕೇನ....ತಪ್ಪಿಸ್ಕೊಂಡ್ಹೋಗೋ ದಾರೀನ ಹುಡುಕ್ತಿರೋವಾಗ, what do you mean tigerಉ?

ಗಂಡ

Just what I said dear boy!

ನರಸಿಂಹಯ್ಯ

(ಬೆದರಿ) What do you mean “what I said”? ಏನು tiger ಅದು? ನಿಮ್ಮ ಮನೇಲಿ?

ಗಂಡ

ಬೆದರಬೇಡ! Dear boy! Tigeroo is just the name of a dogoo!; but, a bulldogoo, which can easily kill a tigeroo!

ನರಸಿಂಹಯ್ಯ

Why is a mere dogoo called…..tigeroo?!

ಗಂಡ

Obviously because this dogoo behaves like a tigeroo! Seven feet jump ಮಾಡತ್ತೆ…at any body's throat! Logicನಲ್ಲಿ ನೀನು failoo—ನಿನ್ನ F.A., ಜ್ಞಾಪಕವೇ…? ಇಲ್ಲ! But coming back to tiger….!

ನರಸಿಂಹಯ್ಯ

(alarmed again) Good God! ತಿರಿಗಿ tigeroo!?

ಗಂಡ

ಛೆ! ಛೆ! I told you…ಹೇಳಿದ್ನೆಲ್ಲಾ… ನಮ್ ನಾಯಿ…..Bull-dog—double ''B''—both capitalsಉ—ಆದರ್ಹೆಸ್ರು "Terror of cocks town" ಅಂತ—"cocks-town" is only a misnomer you know….ಆದ್ರೆ ಒಂದು ಕೋಳೀನೂ ಬಾಕೀ ಇಲ್ಲ ಈ ಕೇರೀಲಿ—It is free in the compound!

ನರಸಿಂಹಯ್ಯ

Why? Is he dangerous?...oh! dogs and cats don't frighten me you know....I am not afraid of him.

ಗಂಡ

Perhaps not you of him, dear boy,....ಆದ್ರೆ ನನಗಿರೋ frightoo, for you...

ನರಸಿಂಹಯ್ಯ

ಯಾಕೇ? Is he dangerous to man?

ಗಂಡ

No! No! He is warmly attached to humanity....!

ನರಸಿಂಹಯ್ಯ

Good! Good!

ಗಂಡ

Good of course....but unfortunately on the instalment planoo!

ನರಸಿಂಹಯ್ಯ

What do you mean "'Instalment plan''?

ಗಂಡ

ಕ್ಷಮ್ಸು? dear boy! You see he has got a warm regard for humanity in generalಉ....in particularಉ...only to that piece of humanity which is nearest to his jawsಉ.....Terrible jaws dear boy...double "T"!....both capitalsಉ!....

ನರಸಿಂಹಯ್ಯ

What am I to do between tigers and tigressesoo?

ಗಂಡ

ಕ್ಷಮ್ಸು! dear boy! of course there is my dog-cart....

ನರಸಿಂಹಯ್ಯ

Good God! ತಿರ್ಗೂ dogಉ...!

ಗಂಡ

Dog ಅಲ್ಲ....dog-cartoo... horse and carriage...you know...what you sircar-walas, I mean, car-walas, would call a two-seaterಉ...on single horse-powerಉ....not a developing but a tiring engine as you go along....Two seater ಅಂದ್ರೆ, ನೀನಾಯ್ತು ನನ್ನ worthy sister ಆಯ್ತು...can you manage to negotiate ribbons?

ನರಸಿಂಹಯ್ಯ

Who is ribbons? ಇನ್ನೊಂದು ನಾಯೀ?

ಗಂಡ

No! No! reins! ಲಗಾಮು you know….I mean, can you drive?

ನರಸಿಂಹಯ್ಯ

Of course, I can….ಅನ್ನು!

ಗಂಡ

ಹಾಗಾದ್ರೆ, ಒಂದ ನಿಮಿಷ್ದಲ್ಲಿ harness ಮಾಡ್ಕೊಂಡು ತಂದ್ ಬಿಡ್ತೇನೆ… what about Tigerಉ?

ನರಸಿಂಹಯ್ಯ

What do you mean tiger again?

(running behind Subbu)

ಆ ಬ್ಲಾಕು ಹಾಕಿಧೀಯಾ, ಸುಬ್ಬು?

(ಧೈರ್ಯವಾಗಿ ಮೊದಲಿದ್ದ ಜಾಗಕ್ಕೆ ಬರುತ್ತ)

Yes, I know….ನಾನೇ ಬರೋವಾಗ ಹಾಕ್ದೆ…What do you mean tiger, again!?

ಗಂಡ

ಕ್ಷಮ್ಸು! dear boy! to make a short story longಉ, ಈ brutesಗ್ಳಲ್ಲಿ ಕೂಡ... there is a sort of freemasonry...free ಏನು....brutesಗೆ....bound-masonry....ನಮ್ಮನೇಲಿ four brutes ಇಧಾರೆ... fourಏ?....three and a half or three and a quarter...I can't tell the proportion because, the littlest....bad grammar....dear boy, ಆದ್ರೆ best wordಉ occasionಗೆ....(approaching the cradle) littlest of the four brutes, is getting bigger everyday....ನಾನು, Tigerಉ, horseಉ....ಈ bruteletಉ...letಏ? Though I beat you in our B.A.....Narasim....you went on for your M.A.....naturally of course... ಕ್ಷಮ್ಸು dear boy! you know I love you...ನಿನ್ನ English ಏ ಎಷ್ಟೇ ಆಗ್ಲಿ betterಉ....ನನಗೇನೋಪ್ಪ! Adolfuss taught us better English than Denham did or Weir tried to do!...but coming back....brute dimunitive ಏನು? brute-let ಏ....ಅಥವ brute-kin ಏ? what is it?

ನರಸಿಂಹಯ್ಯ

ಹಯ್ಯೋ! Hang the brutekin....talk about Tigeroo!...

ಅಮ್ಮವ್ರು

Hang! what do you mean hang the brute-kin? ಯಾರನ್ನಂದದ್ದು? Brute-kin ಅಂತೆ ನನ್ನ baby! ಈ ಮಾತ್ನಾನ Tiger ಕಿವೀಲಿ ಬೀಳ್ಗೇಕಂತೆ ಕಿತ್ ಹಾಕ್ಬಿಡತ್ತೆ ನಿಮ್ಮನ್ನ!...ಛೂ ಬಿಡೀಂದ್ರೆ...ಮೈ ಉರ್ಯುತ್ತೆ!

ನರಸಿಂಹಯ್ಯ

My God! ಕ್ಷಮ್ಸಿ! I meant that beautiful sweet scion of your wonderful family! ಕ್ಷಮ್ಸು! ಸುಬ್ಬು! But come back to Tigeroo....!

ಗಂಡ

ನೋಡು ನರಸಿಂಹ್! Between us brutesoo....meaning, ನಾನು, Tigerಉ, ನಮ್ಮ horseಉ and this bruteletಉ ;....ನಾನು horseನ ನೋಡ್ಕೊಂಡ್ರೆ,...tiger bruteletನ;...ಇಲ್ಲ ನನ್ನ wifeಉ, dog-cartನ drive ಮಾಡ್ಕೊಂಡ್ಹೋದ್ರೆ....tigerಉ horseನ....ನಾನು bruteletನ;....ಹೀಗೆ....a sort of brutal understanding between us;....

ನರಸಿಂಹಯ್ಯ

ಈಗ....I want to go home....take my wife home....!

ಗಂಡ

Certainly, dear boy! that is the pointಉ....ನಾನು horsed cartಗೆ hitch ಮಾಡೋವಾಗ, Tigerಉ.. bruteletನ ನೋಡ್ಕೊಳ್ಳೋಕೆ, ವಳಕ್ ಬಂಧ್ಬಿಡುತ್ತೆ,...and you not being also a bruteಉ....ಈ....hate at first sight ಅಂತ ಕೇಳಿಧೀಯಾ?...it is stranger then love at first sight...ಆ holocaustoo ವೊದಗೀತು ನಿನಗೇಂತ....!

ನರಸಿಂಹಯ್ಯ

Is this the way you show your hospitality?

ಗಂಡ

No! No! hospitalityಗೆ?....cocoa is ready!; but in showing you my hospitality....I don't want to convert my house into a hospitaloo!...you see my fear....ಇನ್ನು Idoformoo...Carbolicoo.... sticking-plasterಉ....lintಉ...nuisance you know....ಮುಂದಕ್ಕೆ trip to cool and salubrious coonoorಉ etc...

ನರಸಿಂಹಯ್ಯ

Good God!

ಗಂಡ

ಹೆದರ್ಬೇಡ dear boy! ಇದಕ್ಕೆಲ್ಲ ಒಂದೇ ದಾರಿ...Now! Where shall I put you away?....ಎಲ್ಲಿ ಬಚ್ಚಿಡೋದು ನಿನ್ನ....ಆಂ!? Narasim, in your college days you were a good bat in cricket ಅಲ್ಲೇ?!

ನರಸಿಂಹಯ್ಯ

Yes! yes! I know I was a good bat why, even now I am a good bat...but what has that got to do with this?

ಗಂಡ

ಏನೂ ಇಲ್ಲ....ಹ್ಯಾಗಿದ್ರೂ good bat ನೀನು....if you can only manage to hang by that roof like a good bat.....ಅದಕ್ಕೆ ಏಣಿ ಬೇಕಾದ್ರೆ ತರ್ತೇನೆ...you see my pointಉ....ನಮ್ಮ Tiger ಕೂಡ ಅಷ್ಟೆತ್ರ ಹಾರ್‍ಲ್ಲಾರ್ದು....

ನರಸಿಂಹಯ್ಯ

Me! Hang !! By that roof!!! Are you mad ?

ಅಮ್ಮಾವ್ರು

(ಅಲ್ಲಿಗೆ ಒಳಗಿನಿಂದ ಬಂದು) Why not? ನೀವೇ ಹೇಳಿದ್ರಲ್ಲ... 'I Shall fly' ಅಂತ... ಯಾಕಾಕ್ಕೂಡ್ದು?....Fly up to the roof!; only don't bring the roof down on my baby's cradle........

ನರಸಿಂಹಯ್ಯ

(ಕಿರಿಚುತ್ತ) Woman!! you will drive me mad !!!

ಅಮ್ಮಾವ್ರು

ಅಯ್ಯೋ! ನಾಯಿ ಜೋಪಾನಾಂದ್ರೆ.. ..ಇವರ್ನ ಕಚ್‌ಬಿಟ್ಟು ಅದಕ್ಕೂ ಹುಚ್ ಹಿಡಿದ್ಬಿಟ್ಟೀತು!....

ಕಮಲು

I Think you are all mad! Let me speak! Brin wavesoo ಅಂದ್ರಲ್ಲ! ನಿಮ್ಮ ಮನೇಲಿ collaroo chainoo ಇಲ್ಲೆ ಸರೋಜ ನಿಮ್ಮ್ ನಾಯೀಗೇ?

ಗಂಡ

Good Heavens! The very thing!....Fancy forgetting! (as he is rushing out)Narasim! dear boy! Now that you are on the throne will you....rule the worldoo for a few minutesoo!!?

ನರಸಿಂಹಯ್ಯ

Awe! close the door after you........dont forget...Tiger!...Before any thing else, chain ಮಾಡು ಅದ್ನಾ....(sottovoce) ಈ cursed dogsನ ಯಾಕೆ create ಮಾಡಿದ್ನೋ ದೇವ್ರು. .!?

ಅಮ್ಮಾವ್ರು

ಯಾತಕ್ಕೆ ಹೇಳ್ಲೇ?....to protect peopleಉ...ನಿಮ್ಗೂ Tigerಗೂ ಇರೋ difference ಇಷ್ಟೆ!....Tigeroo ನಮ್ಮನೆ outsidersಗೆಲ್ಲ terroroo...ನೀವು ನಿಮ್ಮನೆ insidersಗೆಲ್ಲ terroroo....that's all the differenceಉ....!

ನರಸಿಂಹಯ್ಯ

(Hysterically)

Go on! Go on!! what with you and your horrible husbandoo and Tigeroo....ಕವೆಗೋಲಿನ್ನಧ್ಯೆ ಸಿಕ್ಕೊಂಡು ಕಣ್ ಕಣ್ ಬಿಡ್ತಿರೋ ನನ್ನ...go on! goon!!...ಲೇ! ನೀನೂ go onಏ! ಲೇ ನೀನೂ go no ಓ!!...ಊಂ! ಆಕೆ ಕಡೇಗೇ ಸೇರ್ಕೊಂಡೂ, ನೀನೂ go on ಏ!..Subboo! Have you chained that demon yet?!

ಗಂಡ

(ನೇಪಥ್ಯ) Certainly, dear boy!

ನರಸಿಂಹಯ್ಯ

I shall not stop in this room for a minute….ನೀನ್ ಬೇಕಾದ್ರೆ ಇದ್ಕೋ…

ಕಮಲು

ಹಯ್ಯೋ, ನಾನೇನೂ ಹೇಳ್ಲಿಲ್ಲಾಂದ್ರೇ!

ನರಸಿಂಹಯ್ಯ

ಗೊತ್ತೆ! ಗೊತ್ತೇ!! Worst of educating womenoo….No respect for men at all!….This is no place, for me….a man…

(Rushes out)

ಅಮ್ಮಾವ್ರು

ಓಹೋ! Man! ಕೇಳಿದ್ಯಾ ಕಮಲೂ! worst of education ಅಂತೆ for womenoo….proverb ಜ್ಞಾಪಕ್ವಿಲ್ವೇ? “Ignorance is bliss where it is folly to be wise” ಅಂತ? ನಾವು ignoranceನಲ್ಲಿ ಮುಳ್ಗಿರೋದು ಆ brutesಗೆ blissoo;… ನಾವು wise ಆಗೋ ಹಾಗೆ ನಮ್ಮನ್ನ educate ಮಾಡೋಕೆ… chance ಕೊಡೋದು, ಅವರ folly ಅಂತೆ….ಕೇಳಿದ್ಯಾ?

ಕಮಲು

ಕೇಳಿದೆ…

ಅಮ್ಮಾವ್ರು

Serious ಆಗಿ ಕೇಳ್ತೇನೆ, ಕಮಲಾ ಇನ್ನೆಷ್ಟು ದಿನಾಂತ ನೀನು ಹೀಗೆ suffer ಮಾಡ್ತಿರೋದು?

ಕಮಲು

ಹ್ಯಾಗೆ suffer ಮಾಡ್ತಿರೋದು?

ಅಮ್ಮಾವ್ರು

ನಿನ್ good looksಓ goneಊ! ನಿನ್ನ hairಓ unkemptoo! ಇದೇನು ಈ ಹರಕ್ಲು ಸೀರೆ?!

ಕಮಲು

ಹಯ್ಯೋ! ಸರೋಜ! ಇದೆಲ್ಲ ಗಮನಿಸೋಕೆ ಬಿಡ್ವೆಲ್ಲಿದೆ ನನ್‌ಗೆ? ನನಗೆ ತಾನೇ ಅಗ್ಲೀ..ಯಾವ motherಗೆ ತಾನೇ ಆಗ್ಲೀ, ಗಮನಿಸೋಕ್ಕೆ ಮನೇಲಿ ಮಕ್ಕಳಿರೋವಾಗ, ಸೀರೇನೂ ಜಡೇನೂ ಗಮನಿಸೋಕೆ ಬಿಡ್ವೆಲ್ಲಿದೇಮ್ಮಾ?

ಅಮ್ಮಾವ್ರು

ಹಾಗಾದ್ರೆ ನಿನ್ನ ಏಳು ಮಕ್ಕಳ್ನ ಗಮನಿಸೋದೇನೇ ನಿನ್ನ life's workoo....enjoymentoo?....ಇದೇನೇ ನಿನ್ನ ambitionoo!?

ಕಮಲು

ಹೌದು ಸರೋಜ!....ನನ್ನ ಏಳುಮಕ್ಕಳೂ, ಮುಂದಕ್ಕೆ three of them fathersoo, four of them mothersoo worldನಲ್ಲಿ ಆಗ್ಬೇಕೂಂಬೋದನ್ನ ಮರೀದೆ, ಹಗ್ಲೂ

ರಾತ್ರಿ ಅದಕ್ಕವರನ್ನ ತಯಾರ್ಮಾಡೋದೇ ನನ್ನ life's ambitionoo! ಈ ಗಲಾಟೇಲಿ,... ಈ ನನ್ನ ವಯಸ್ನಲ್ಲಿ, ನನ್ ಸೀರೆ ಹರಕ್ಲೋ ಹೊಸ್ದೋ, ನನ್ನ ಬೈತೆಲೆ ನೆಟ್ಟಗೋ ಸೊಟ್ಟೋ ಇದೆಲ್ಲ ಗಮನಿಸೋಕೆ ಬಿಡ್ವೆಲ್ಲಿಧೆಯೇಮ್ಮಾ? ಯಾಕೇ? ನಿನ್ನ ambition ಏನೂ? ನಿನ್ನ life's workoo ನಿನ್ನ enjoymentoo ಏನೂ???

ಅಮ್ಮಾವ್ರು

ಏನು? ನನ್ನ life's workಉ! ನನ್ನ enjoyment! ನನ್ನ ambitionಉ!! ಹೀಗೆ ಕೇಳಿದ್ರೆ ಏನು ಹೇಳೋದು ಕಮಲಾ?!

ಕಮಲು

ಏನೂ ಹೇಳೋದಕ್ಕಾಗೋದಿಲ್ಲ ನಿನ್‌ಕೈಲಿ ಗೊತ್ತು..... ನಾನ್ಹೇಳ್ಲೆ?

ಅಮ್ಮಾವ್ರು

ಹೇಳು ! ಹೇಳು!

ಕಮಲು

ಈಗ್ನೋಡು ಸರೋಜ! ನಾನಿಬ್ರೂ collegeನಲ್ಲಿ friends ಆಗಿದ್ವು. ಇಬ್ರೂ ಮದ್ವೆ ಮಾಡ್ಕೊಂಡು ಬೇರ್ಬೇರೆ ಆಗ್ಹೋದಾಕ್ಷಣ್ವೇ........ನಿನ್ನಲ್ಲಿ ನನಗಿರೋ loveಉ........interestoo ಕಮ್ಮೀ ಆಗ್ತಾ ಬಂತೂಂತ ತಿಳ್ಕೊಂಡ್ಯಾ....ನಿನ್ನ careerನೆಲ್ಲ college daysನಲ್ಲಿ ನನ್ನ little baby sisterನ್ಹಾಗೆ, ಹ್ಯಾಗೆ ಗಮನಿಸ್ಕೊಳ್ತಿದ್ನೋ, ಹಾಗೇ ಈಗ್ಲೂನೂ ಗಮನಸಿಸ್ತಾಲೇ ಇದೇನೆ....ನಿನ್ನ meetingsoo....ನಿನ್ನ lecturesoo....88, articlesoo papersನಲ್ಲಿ ಒಂದ್ಬಿಡ್ದೆ ಓದ್ತಾಲೂ ಇಧೇನೆ... ಈಗ್ನೋಡು!...ಆಕೆ ಯಾರು?

ಅಮ್ಮಾವ್ರು

ಯಾವಾಕೆ?

ಕಮಲು

ನಿಮ್ಮ associationನಿಂದ resign ಮಾಡಿಸ್ಬಿಟ್ಲಲ್ಲ ಆಕೆ….ಆಕೆ brother ಕೂಡ ಎಲ್ಲೋ ಕೆಲಸ್ದಲ್ಲೂ ಇಧಾನೆ…small peculiar manಉ….

ಅಮ್ಮಾವ್ರು

Peculiarಉ? ಹ್ಯಾಗೆ peculiarಉ?

ಕಮಲು

ಹ್ಯಾಗೇ? ನಮ್ಮ ರಾಮು ಇಧಾನೆ ನೋಡು…….ನನ್ನ first boyಇ..ಅವ್ನು ಓದೋದು fourth formಉ…ಓದೋದೇನು-strictly ಓದ್ದೇ ಇರೋದು-fourth formಉ….ಅವ್ನಿಗೆ booksoo ಅಂದ್ರೆ ಆಗೋದಿಲ್ಲ….ಅವ್ನ life's ambitionoo….ಊರ್ನಲ್ಲಿರೋ Cinemaಲಿ ಒಂದು filmoo ಬಿಡ್ದೇ ನೋಡೋದು….ಅದ್ರಲ್ಲಿ ಯಾವ್ದಾದ್ರೂ ಅವನ್ಮನಸ್ಸಿಗೊಪ್ತೋ, ನನ್ನ ಎಳಕೊಂಡ್ಹೋಗಿ ಅದನ್ನ ತೋರ್ಸೋವರ್ಗೂ ಅವನ್ಮನಸ್ಸಿಗೆ ಶಾಂತಿ ಇಲ್ಲ…ಅವನ film divinity…ದೊಡ್ಡ specks ಹಾಕ್ಕೊಂಡಿರೋ comedian ಒಬ್ಬ….ಹೆಸ್ರೇನೂ?! Harold Lloyd!!

ಅಮ್ಮಾವ್ರು

Harold Lloydoo! ಅವನೆಲ್ಲಿ ಬಂದ ಇಲ್ಲೀ?

ಕಮಲು

ಎಲ್ಲಿ ಬಂದ್ನೇನೂ?- ಈ peculiar man ಇಧಾನಲ್ಲಾ ಅವನ್ನೋಡಿದ್ರೆ...ಅವನ ಜ್ಞಾಪ್ಕ ಬರುತ್ತೆ—ಆತನ sisterನೇ ನೀವೆಲ್ಲ ವದ್ದು ಓಡ್ಸಿದ್ದು ನಿಮ್ಮ associationನಿಂದ... ಯಾಕೇಂತ ಕೇಳೋದು ನಾನು....ಅವಳ್ನ resign ಮಾಡ್ಸಿದ್ದು?

ಅಮ್ಮಾವ್ರು

Harold Lloyd! ದೊಡ್ಡ spectacles! ಓ! I know the creature now! ಅದೇ? ಇಲ್ಬಂದಿತ್ತು ನಿನ್ನೆ on behalf of his sisteroo; ಅಬ್ಬ! ಅದೂ ಒಂದು ಗಂಡ್ಸೇ!....spineless wormಉ....ಬೆನ್ಮುರಿದ ಬಸವನ್ಹುಳು....ಆತನ sisterನೇ? ಹೂಂ! ಅವ್ರ attitredeಉ Home ಬಿಟ್ಟು ಓಡ್ಹೋಗೀ....woman's responsibilities of wife-hood and mother-hoodನ ತಪ್ಪಸ್ಕೊಂಡು ಕುಣಿದಾಡೋಕೆ! ಅದೆಲ್ಲಿ ಸರಿಹೋಗುತ್ತೆ ನಮ್ಮ associationನಲ್ಲಿ?....ನಾವು ಈಗ fight ಮಾಡ್ತಿರೋದು ಮನೇಲಿದ್ಕೊಂಡು equal rights with husbandsನೂ assert ಮಾಡ್ಕೊಂಡು, woman's responsibilities of wife-hood and mother-hoodನ shirk ಮಾಡ್ದೆ ವಹಿಸ್ಕೊಳ್ಳೋಕೆ!....

ಕಮಲು

ವಹಿಸ್ಕೊಳ್ಳೋಕೋ, ನಡ್ಸೋಕೋ? ಕೋಪಸ್ಕೋಬೇಡ....ನೀನು ನಿನ್ನ homeನಲ್ಲಿ ಇದ್ಕೊಂಡಿರೋದೇನೋ ಒಪ್ಕೊಂಡೆ equal rightsನ assert ಮಾಡ್ತಿರೋದ್ನ, more than ಒಪ್ಕೊಂಡೆ;....ಆದ್ರೆ wifehood and motherhood responsibilities ಅಂದ್ಯೆಲ್ಲಾ,....ಆ. motherhoodನ ಜವಾಬ್ದಾರಿ ಏನೀಗ ವಹಿಸ್ತಿರೋದು ನೀನು....practical ಆಗಿ...?

ಅಮ್ಮಾವ್ರು

ವಹಿಸ್ದೆ ಏನಿರೋದು ಈಗ? ಅಡಿಗೆ ನಾನೊಂದ್ಸರ್ತಿ ಇವ್ರೊಂದ್ಸರ್ತಿ... household workಉ, ನಾರೊಂದು workoo ಇವ್ರೊಂದು workoo....ಮಿಕ್ಕದ್ದೆಲ್ಲ ಹೀಗೇ!

ಕಮಲು

(interrupting) ನಾನ್ಹೇಳಿದ್ದು motherhood ಅಂದ್ಯಲ್ಲಾ, ಆ ಜವಾಬ್ದಾರಿ.... ಅದಕ್ಕೆ equal rights ಎಲ್ಲಿಂದ ಬಂತು?...rightsoo, qualificationsoo ನಿನಗಿರೋ ಹಾಗೆ ನಿನ್ನ husbandಗೆ ಎಲ್ಲಿಧೇ?

ಅಮ್ಮಾವ್ರು

(perplexed) motherhood! ಅಯ್ಯೋ! ಇದೇನು quibbling ಕಮಲೂ?....after all motherhoodನ responsibility ಏನು?....ಮಗು healthy ಆಗಿರೋದ್ನ ನೋಡ್ಕೋಬೇಕು....ಅದರ feedingಉ ಅದರ restoo....ಅದರ growthoo! four ಓ, five ಓ, six years ಓ, ನೋಡ್ಕೊಳ್ಳೋದು....... ಆ ಮೇಲಿದ್ದೇ ಇದೆ... ಗಂಡ್ಬಾದ್ರೆ ಅವ್ನಾಯ್ತು ಅವ್ನ master ಆಯ್ತೂ....ಅವನ ಸ್ಕೂಲು, ಅವನ collegeಉ, ಅವನ careerಉ, ಒಂದು suitable marriageಉ, suitable appointmentಉ....ತೀರ್ತು!....ಹೆಣ್ಣಾದ್ರೆ, two more years at home....ಆ ಮೇಲೆ ಅವಳ ಸ್ಕೂಲು;.....ಮದ್ವೆ; ಗಂಡ sensible ಆಗಿದ್ರೆ ಮುಂದಿನ education 2-3 ವರ್ಷ... ಇಲ್ಲಾ, ಅವನು orthodox fool ಆಗಿದ್ರೆ, ಅದೂ ಇಲ್ಲ...ಇದ್ರ ಮೇಲೆ ಏನು responsibility motherhoodಗೆ? Practical ಆಗಿ ಏನ್ನಡಸ್ತೀಯಾಂತ ನನ್ಕೇಳ್ತೀಯಲ್ಲಾ ; ನನಗಿರೋದು ಒಂದು baby....ಇನ್ನೂ "ಅಮ್ಮಾ, ಅಮ್ಮಾ" ಅಂತಾನೆ....ಅದಕ್ಕೇಲೆ ಒಂದ್ಮಾತೂ

ಇಲ್ಲ....ಇನ್ನವನು ಕಿರ್ಲಿದಾಗ ಹಾಲು ಕೊಡೋಕೆ....ಅವ್ನು ಅತ್ತಾಗ ಬೊಂಬೆ ಆಡ್ಸೋಕೆ, ತೊಟ್ಲು ತೂಗೋಕೆ, ಆಯಾ ಒಬ್ಳಿಧಾಳೆ, ಹಗ್ಲೂ ರಾತ್ರಿ....ಇನ್ನವನ amusementsಗೆ ಇವ್ರು, Tigerಉ....ಇದ್ಕೇಳು ಕಮಲೂ! ಬಂದೋರ್ಕಾಲು ಕಚ್ಚೋಕೇಂತ ಬಾಯ್ಬಿಡೋ Tigerನ ಬಾಯಲ್ಲಿ ಕೈಯಿಡೋದೇ ಅವನಿಗಾನಂದ....ಅದಕ್ಸಯ್ರ್ಯಾಗಿ ಆ brute ಓ ಮೊಣ ಕೈನವರ್ಗೂ baby ಕೈನ ಬಾಯ್ಲಿಟ್ಕೊಂಡು ಕಣ್ ಕಣ್ ಬಿಡ್ತಾ ನಿಂತಿರೋದೇ ಇದಕ್ಕಾನಂದ... ಈ ಮಧ್ಯದಲ್ಲಿ....ನನ್ನ public activitiesನಲ್ಲೇ ನಾನು absorb ಆಗಿರೋವಾಗ, ಅದಕ್ಕೆ ಹಾಲ್ಕೊಡೋದು, ಅದ್ರ ತೊಟ್ಟ್‌ಲಾಡ್ಸೋದು, ಅದನ್ನ ಆಡಸ್ಕೊಳ್ಳೋದು....ಇದನ್ನ ನಾನು ಮಾಡಿದ್ರೇನು....ಆಯಾ ಮಾಡಿದ್ರೇನು....ಯಾರು ಮಾಡಿದ್ರೇನು? ಈಗ ತಾನೇ ಏನು, ಇನ್ನು six yearsಗೆ ತಾನೇ ಏನು?...ಆಮೇಲೆ ಅವನಾಯ್ತು....ಅವನ teacherಉ....schoolಉ....etc.,...ಆಗ್ಹೋಯ್ತೆ, ನಿನ್ನ motherhoodoo?; ಸದ್ಯಕ್ಕೆ at least...?

ಕಮಲು

ನೀನು ಏನು woman ಆಗಿ ಬೆಳದ್ರೂನು ಅಬ್ಬ! How big and beautiful you are!! ಆದ್ರೂನೂ you are the same old baby....ನಾನು nurse ಮಾಡೀ...kiss ಮಾಡೀ.... ನಿನ್ನ home workನೆಲ್ಲ ನಿನ್ಕೈಲಿ ಮಾಡಿಸ್ತಿದ್ದ same old baby!....ನಿನ್ನ public activitiesoo !! ಇಷ್ಟು lecture ಕೊಡೋ ನೀನು ಹೇಳೊ ಹಾಗೆ....mother-hoods responsibilitiesoo ಅಂದ್ರೆ,........ ಮಗೂನ್ ಹೆರೋದು....ಅದು ಕಿರ್ಲೋವಾಗ ಹಾಲು ಕೊಡೋದು.... ಅದನ್ನಾಡ್ಸೋಕೊಬ್ಳು ಆಯಾ.... ನಗ್ಸೋಕೊಂದು ನಾಯಿ....ಬೆಳೆದ್ಮೇಲೆ....ಬೆತ್ತವಂದ್ಕೈಲಿ book ಇನ್ನೊಂದ್ಕೈಲಿ ಇಟ್ಕೊಂಡು....ಸಂಬ್ಳಕ್ಕೇಂತ ಪಾಠ ಹೇಳ್ಕೊಡೋ ಮೇಷ್ಟ್ರು ಒಬ್ಬ.... ಮುಂದಕ್ಕಾ

ಮಗೂನ ಹಣೇ ಬರಹ ಅದ್ರ ಕೈಲೇ!;....ಅವನು thief ಆಗ್ತಾನೋ saint ಆಗ್ತಾನೋ, ಇದೆಲ್ಲ ನಿನ್ನ ಜವಾಬ್ದಾರಿ ಅಲ್ಲ ಅಲ್ವೆ! Brute ಆಗ್ತಾನೋ....ಇಲ್ಲ beautiful husbandoo....patient parentoo...decent citizenoo ಆಗ್ತಾನೋ, ಇದೆಲ್ಲ ನಿನ್ನ ಜವಾಬ್ದಾರಿ ಅಲ್ಲ ಅಲ್ವೇ? ಹಯ್ಯೋ! ಸರೋಜಾ! "ಅಮ್ಮಾ, ಅಮ್ಮಾ ಅನ್ನತ್ತೆ ನನ್ನ baby" ಅಂದ್ಯಲ್ಲಾ....ದಿವಸದ ಇಪ್ಪತ್ನಾಲಕ್ಕು ಘಂಟೇಲಿ ಹತ್ತು ಗಂಟೆ ಹೊತ್ತು ನಿದ್ದೆ ಮಾಡುತ್ಯೋ ಏನೋ; ಮಿಕ್ಕ ಹದ್ನಾಲಕ್ಕು ಗಂಟೆ ಕಾಲ್ದಲ್ಲಿ ನಿನ್ನ ಮುಖಾನ ಅರ್ಧ ಗಂಟೆ ಹೊತ್ತು ಕೂಡ ನೋಡೋದಿಲ್ಲ ಅದು!...ಅದಕ್ಕೆ "ಅಮ್ಮಾ, ಅಮ್ಮಾ" ಅಂತ ಹೇಳ್ಕೊಡೋಳು ನಿನ್ನ ಆಯಾ....ಅದಕ್ಕೆ ಹಸಿವಾದಾಗ Bengers foodಓ ....Mellin's foodಓ....Glaxoನೋ ಕೊಟ್ಟು ಹಸಿವೆ ತೀರ್ಸೋಳು ನಿನ್ನ ಆಯಾ! ಅದಕ್ಕೆ ಗೊಂಬೆ ತೋರ್ಸಿ ತೊಟ್ಲು ತೂಗಿ, ಮಲಗ್ಸೋಳು ನಿನ್ನ್ ಆಯ!....ಹೀಗಿರೋವಾಗಾ ಆ ಮಗು "ಅಮ್ಮಾ ಅಮ್ಮಾ" ಅನ್ನೋವಾಗ್ಲೆಲ್ಲಾ ಆ ಆಯಾನ ಮುಖವೋ ಇಲ್ಲ ನಿನ್ಮುಖವೋ ಅವನ ಚಿಕ್ಕ mind ನಲ್ಲಿ ಹೊಳೆಯೋದು?....ಅವನ baby mindನಲ್ಲಿ ನೀನು motherಓ....ಇಲ್ಲಾ...ಆ ಸಂಬ್ಳಕ್ಕಿರೋ ಆ servant womanoo motherಓ ಅಂತ ಕೇಳಿದ್ರೆ, ಆ little man in the making ಏನ್ಹೇಳೀತು....ಇನ್ನಾರು ವರ್ಷದ್ವರ್ಗೂ ಹೀಗೆ ಆಯಾ ಕೈಲಿ ಅಂದ್ಯಲ್ಲಾ ಆ ಮಗೂನ;?...ಏನು whole of Indiaನೇ ಮಹಾತ್ಮ Gandhi's non-violence policyನ ಹೊಗಳಿದ್ರೂನೂವೆ, ಯಾವ ಮಹಾತಾಯೀನೋ...ಆತ ಮಗು ಆಗಿದ್ದಾಗ..."ಚೀಮೆಗಳನ್ನ ಕೊಲ್ಲಬಾರ್ದು"..."ನೊಣಗ್ಳನ್ನ ಹೊಡೀಬಾರ್ದು"..."ನಾಯಿ ಬೆಕ್ಕುಗಳನ್ನ ಒದೀಬಾರ್ದು"...."ಜವಾನ್ರನ್ನ ಬೈಬಾರ್ದು" ಅಂಬೋದ್ನೆಲ್ಲ, ವೊದ್ದೋ–ಮುದ್ದಿಟ್ಟೋ... ಹೊಡ್ದೋ–ಬಡ್ದೋ...ಬೈದೋ ಇಲ್ಲಾ ಬಾಚಿ ತಬ್ಕೊಂಡೋ... ಹ್ಯಾಗೋ, ಆ ಮಗೂ ಮನಸ್ನಲ್ಲಿ ಇಳಿಸ್ಬಿಟ್ಳೋ....ಈಗ Mother Indiaಗೆ freedom ಬರೋಕೆ ದಾರಿ ಒಂದೇವೊಂದು. "ಅಹಿಂಸಾ ಪರಮೋ ಧರ್ಮ" ಅಂತ ಆತ proclaim ಮಾಡ್ತಿಧಾನೆ

ಪ್ರಪಂಚಕ್ಕೆಲ್ಲಾ...ಆತನ policy ಆತನ ಮಹಾತ್ಮೆ ಅಂತ ಎಲ್ರೂ ಹೇಳಿದ್ರೂನೂ....ನಮಗ್ಗೊತ್ತು....womenಗೆ.......early childhoodನಲ್ಲಿದ್ದ mother's influenceಏ later manhoodನಲ್ಲಿ man's characteroo....destiny ಅಂತ....... ಇಲ್ನೋಡು ಸರೋಜ! God gave you that child! ಮುಂದಕ್ಕವನು ಏನಾಗ್ತಾನೋ.....good manಓ bruteಓ....scoundrelಓ saintಓ...self-centered pigಓ ಇಲ್ಲಾ self-sacrificing patriotಓ....ಯಾವುದಾಗ್ತಾನೋ ಅದೆಲ್ಲ ನಿನ್ನ ಕೈಲೇ ಇಧೆ...ಅಮ್ಮಾ ಅಮ್ಮಾ ಅನ್ನೋ ಈಗ್ನಿಂದ...ಆ master ಕೈಲಿ educate ಮಾಡೋಕೆ ಕಳ್ಸೋ ಈ ಆರೇಳು ವರ್ಷದಲ್ಲಿ, ಇದಾಗಿ ಇಲ್ಲಾ ಅದಾಗ್ಲಿ decide ಮಾಡೋ ಜವಾಬ್ದಾರಿ ಎಲ್ಲಾ ನಿನ್ನ ಕೈಲಿ ಇಧೆ...!!

ಅಮ್ಮಾವ್ರು

(suddenly looking up) ಎಲ್ಲ ನನ್ನ ಕೈಲೇ? ಹಾಗಾದ್ರೆ, schoolsoo, collegesoo "ನಾವು ಮಾಡ್ತೇವೆ ಮಾಡ್ತೇವೆ" ಅಂಬೋ educationನ ಅರ್ಥವೇನು? What are schools and colleges for, but to educate children?....ಬೇರೇ ಏನು function ಅವುಗಳ್ಗೆ?

ಕಮಲು

To educate pupils of course... !

ಅಮ್ಮಾವ್ರು

(interrupting) ಮತ್ತಿರ್ಗ್ಗಿ ನೋಡು ನಿನ್ನ quibblingoo!?

ಕಮಲು

ಸ್ವಲ್ಪಿರು....quibblingಊ ಇಲ್ಲ, ಏನೂ ಇಲ್ಲ......educate ಅಂದ್ರೇನು?— dictionary ಇಧೆಯೇ? derivation ನೋಡೋಣ—ಹುಂ.... ಇಲ್ನೋಡು....'E' Out.... 'Duco'....to lead...to lead out!....ಪೂರ್ವಜನ್ಮದ ಪ್ರಭಾವದಿಂದ್ಲೋ, ಗೋತ್ರದಿಂದ್ಲೋ...ರಕ್ತದಿಂದ್ಲೊ....ಇಲ್ಲಾ....ಅಮ್ಮಾ ಅಮ್ಮಾ ಅಂತ ಬಾಯ್ಬಿಟ್ಟಾಗ್ನಿಂದ ಸ್ಕೂಲಿಗ್ಬಂದ್ಸೇರೋವರ್ಗೂ, ನಾನ್ಹೇಳಿದ್ದಾಗೆ "ಸುಳ್ಳು ಹೇಳಬಾರ್ದು"..."ಸುತ್ಮುತ್ಲೂ ಇರೋರ್ನ ಹಿಂಸಿಸಬಾರ್ದು".... "ಎಲ್ಲರಿಗೂ ಉಪಯೋಗವಾಗಿರಬೇಕು" ಅಂತ, ಹೀಗೆಲ್ಲ ತಾಯಿ ಆದವಳು ವಳಗಿಳಿಸಿರೋ ಗುಣಗಳ್ನ, ಸ್ಕೂಲುಗ್ಳು, ಕಾಲೇಜುಗ್ಳು, ಹೊರಕ್ಕೆಳ್ದು...ಸ್ಕೂಲಿಗೆ ಬಂದ್ಮಕ್ಳು college ಬಿಟ್ಟು ಹೊರಗ್ಹೊಡೋರ್ವಾಗ, ಮನೇಗೂ, ಸಮಾಜಕ್ಕೂ, ದೇಶಕ್ಕೂ ಉಪಯೋಗಿಗ್ಳಾಗಿರೋ ಹಾಗೆ ಮಾಡೋದೇ educationಉ!...childhoodನಲ್ಲಿ neglect ಮಾಡಿ spoil ಮಾಡಿ....bundles of selfishness ಆದ ಮಕ್ಕಳ್ನ, ಸ್ಕೂಲ್ಸಿಗೆ ಕಳ್ಸಿದ್ರೆ,....ಆ schoolsoo ಎಂಥಾ perfect system of educationನ adopt ಮಾಡಿದ್ರೆ ತಾನೇ ಏನೂ?;....ಒಂದು ಚೊಂಬೂನೂ, ಒಂದು ಬಿಂದ್ಗೇನೂ ಬೀಳದ ಭಾವೀಲಿ ಎಂಥಾ ಪಾತಾಳಗರ್ಡೀನ ಹಾಕಿ ಎಳದ್ರೂನೂ ಹ್ಯಾಗೆ ಒಂದ್ಬಾತ್ರೇನೂ ಹೊರಬೀಳೋದಿಲ್ವೋ ಹಾಗೆ ಮನೇಲಿ spoilt ಅದ ಈ ಮಕ್ಕಳ selfishness ಹೊರಬಿದ್ದೀತೇ ಹೊರ್ತು... ಇಲ್ಲದ ಗುಣಾನ ಎಲ್ಲಿಂದ ತಂದು ಹೊರಗ್ಹಾಕ್ಯಾರು,...mastersoo....professorsಉ?! ವೊಟ್ನಲ್ಲಿ ಹೇಳ್ತೇನ್ಕೇಳು, ಸರೋಜ!... ನಮ್ಮ womenನ function ಏನು....ಹೆಂಗ್ಸಾಗ್ಹುಟ್ಟಿದ್ದಕ್ಕೆ?.....ನಮ್ಮ instinct ಹೇಳತ್ತೆ ಇಲ್ಲಿ (touching her heart)....mothers ಆಗೋಕೆ ಅಂತ....therefore essentially wivesoo!....ನಿನ್ನ people ಎಲ್ಲಾ intellectualoo....richoo....aristo-craticoo...ನಿನ್ನ motheroo ನಿನ್ನ schoolಗೆ ಕಳ್ಸಿದ್ದು brilliant careerಗೆ........

accomplishmentsಗೆ ಅಲ್ವೇ?……. ನನ್ನ mother ನನ್ನ schoolಗೆ ಕಳ್ಸೋವಾಗ ಕೇಳ್ದೆ… “ನೀನು ಕಲಿಯದ ವಿದ್ಯಾ ನಾನು schoolನಲ್ಲಿ ಕಲ್ತು ನಿನಗಿಂತ ನಾನೇನು ಹೆಚ್ಚಾಗಾಗ್ಬೇಕಮ್ಮಾಂತ” ಕೇಳಿದ್ದಕ್ಕೆ, ನಮ್ಮಮ್ಮ …”ಕಮಲೂ, ನನಗಿಂತ ನೀನು ಹೆಚ್ಚಾಗಾಗ್ಲೇ ಆಗ್ತೀಯ. ನಾನೋ ಪೆದ್ದು…ನನಗಿಂತ್ಲೂ ಪೆದ್ದಗಿದ್ದ ನಮ್ಮಮ್ಮ, ನಿನ್ನ ಇಷ್ಟರಮಟ್ಟಿಗೆ ಬೆಳ್ಸೋ ಹಾಗೆ ನನ್ನ ಮಾಡಿದ್ಮೇಲೆ, ನೀನು ವಿದ್ಯಾವಂತಳಾದ್ರೆ, ನಾನು ನಿನ್ನ ಬೆಳಸಿದ್ದಕ್ಕಿಂತ ಚನ್ನಾಗಿ ನೀನು ನಿನ್ಮಕ್ಕಳ್ನ ಬೆಳ್ಸೋ ಜಾಣ್ತನ ನಿನ್‌ಗೆ ಬರುತ್ತೆ; ಇನ್ಮುಂದಕ್ಕೆ ನೀನು ನಿನ್ಮಕ್ಕಳ್ನ ವಿದ್ಯೆಗೆ ಹಾಕಿದ್ರೆ ಅವ್ರು ಅವ್ರ ಮಕ್ಕಳ್ನ ನಿನಗಿಂತ್ಲೂ ಚನ್ನಾಗಿ ಸಾಕಿ ಬೆಳಸ್ತಾರೆ, ಅನ್ನೋ ಧೈರ್ಯದಮೇಲೆ, ನೀನು ಸ್ಕೂಲಿಗೆ ಹೋಗ್ಲೇಬೇಕೂಂತ ಕಳಿಸ್ತಿರೋದು ನಿನ್ನ” ಅಂತ ನಮ್ಮಮ್ಮ ನನ್ನ schoolಗೆ ಕಳ್ಸಿದ್ದು. ಆದ್ರಿಂದ್ಲೇ ಸರೋಜ! ನಾನು schoolನಲ್ಲಿ ಹೆಜ್ಜೆ ಇಟ್ಟಾಗಿನಿಂದ “I shall be a better mother to my children than my mother, who never went to school, was to me” ಅಂಬೋ idea ಮೊದ್ಲೇ ನನಗಿತ್ತೋ, woman’s educationನ purpose….homeಗೆ supplement ಮಾಡೋಕೇ ಹೊರ್ತು, homeನಿಂದ alienate ಮಾಡೋಕೆಲ್ಲ, ಅಂಬೋ ಅಭಿಪ್ರಾಯದ ಮೇಲೇ ನಾನು ನನ್ನ educationನ ಅಷ್ಟು ಆಸೆಯಿಂದ completeಮಾಡಿದ್ದು.

ಅಮ್ಮಾವ್ರು

ಹಾಗಾದ್ರೆ….out-side the home, function ಇಲ್ವೆ womanಗೆ?….educated womanಗೆ?….service to the world ಏನೂ ಇಲ್ವೆ?

ಕಮಲು

ಇಥೆ! ಇಲ್ದೆ ಏನು!....ಆದ್ರೆ brutal fathers ಆಗಿಯೂ, careless and frivolous mothers ಆಗಿಯೂ ಆಗಿ, ಮುಂದೆ ಬರೋ ಅಪಾಯಕ್ಕೆ ಮನೆ ಮಕ್ಕಳನ್ನು ಗುರಿಮಾಡ್ಬಿಟ್ಟು, worldಗೆ ಮಾಡೋ serviceoo service ಅಲ್ಲಾ, dis-serviceಉ! ಹೊರಗೆ ನೀನು ನಿನ್ನ meetingsನಲ್ಲಿ "ನಾನು educated Womanoo, ನನ್ಮಾತುಕೇಳಿ....ನೀವೆಲ್ಲ ನನ್ನಹಾಗೆ educated ಆಗ್ಬೇಕು—ಮನೇಲಿ ಇದ್ಕೊಂಡು—wifehood and motherhood responsibilitiesನ shirk ಮಾಡ್ದೆ ವಹಿಸ್ಕೊಂಡು...dutiful wife ಆಗಿಯೂ, kind and wise mother ಆಗ್ಯೂ ಇರ್ಬೇಕು... ಇದ್ನೆಲ್ಲ ತಪ್ಪಿಸ್ಕೊಂಡು—ಈಗ್ನೀನು dismiss ಮಾಡಿದ್ಯಲ್ಲ ಆ ಮೆಂಬರಿನ್ಹಾಗೆ—ಕುಣಿದಾಡ್ಬಾರ್ದು" ಅಂತ ಸಾರ್ತಿರೋದು, ಊರಲ್ಲೆಲ್ಲಾ ನೀನು ನಿನ್ನ meetingನಲ್ಲಿ....ಇಲ್ಲಿ ಮಕ್ಕಳು ಅಮ್ಮಾ ಅಮ್ಮಾಂದ್ರೆ...,ಆಯಾ....ಆಡ್ಸೋದು....tigeroo...ಅಣ್ಣಾ ಅಣ್ಣಾಂದ್ರೆ...ನಿನ್ನಾಯೀನ ನೋಡ್ಕೊಳ್ಳೋ ಹುಡ್ಗ....ಹೀಗೆ ಬೆಳ್ದು petted, selfish, spoilt child ಆಗಿ....schoolನಲ್ಲಿ snoboo prigಆಗಿ, brutal husbandoo, careless fatheroo,….dishonest citizenoo ಆಗಿ ಬೆಳೇತಿರೋದು ಇವನು! ಇನ್ನು ಮುಂದಕ್ಕೆ ನಿನ್ನ ಮುಪ್ಪಿನಲ್ಲಿ, ನೀನು ಈಗ ನಿನ್ಮಗೂಗೆ ತೋರಿಸ್ತಿರೋ criminal neglectನ ನಿನಗೆ ಅವ್ನು ತೋರ್ಸಿ ನಿನ್ನ ಒಂದ್ಮೂಲೇಲಿ ಕುಕ್ಕರಿಸಿಸೋವಾಗ ನೀನು ಈಗ ಕುಣಿದಾಡ್ತಿರೊ meetingsನ memory ಒಂದೇ consolationoo ನಿಂಗೆ...ಸರೋಜ! ನಾನ್ಹೇಳೋದ್ಕೇಳು....ಆ horrible ಆಯಾನ ವದ್ದೋಡ್ಸು ಮೊದ್ಲು....ಅವ್ನು 'ಅಮ್ಮಾ ಅಮ್ಮಾಂತ' ಕಿರ್ಲೋವಾಗ್ಲೆಲ್ಲ ನಿನ್ನ ಮುಖಾನ್ತೋರ್ಸು....ಅವನು ಅತ್ತಾಗ ನೀನು ಹಾಲ್ಕೊಡು...ಹೊರಗ್ಹೋಗೋವಾಗ ಅವನ baby eyesನ daze ಮಾಡೋ blue sky....golden sun...green trees ಇವುಗಳೆಲ್ಲಾ ನೀನು ತೋರ್ಸು !!

ಅಮ್ಮಾವ್ರು

ಸಾಕು ಕಮಲೂ! ಸಾಕು!

ಕಮಲು

(putting her arm round Saroja)

ನಮ್ಮನೇಗ್ಬಾ ನಾಳೆ...baby ನೂ ಕರ್ಕೊಂಡ್ಬಾ....ಬಿಸಿಲ್ನಲ್ಲಿ ಬೇಡ....ಸಾಯಂಕಾಲದ್ಹೊತ್ತು....Tigerನೂ ಕರ್ಕೊಂಡ್ಬಾ....ನಮ್ಮ ರಘೂಗೆ animals ಅಂದ್ರೆ ಅಂಜಿಕೆ....ನಿನ್ನ baby ಆ terror ಜೊತೇಲಿ ಆಡೋದನ್ನೋಡಿದ್ರೆ ಅವ್ನ fearoo ಹೋದೀತು....ಬರ್ತೀಯಾ?

ಅಮ್ಮಾವ್ರು

(Without looking up)

ಬರ್ತೇನೆ ಕಮಲೂ.

ಕಮಲು

ಹೌದು!? ನಾಳೇನೇ ಅಲ್ವೆ ಸಾಯಂಕಾಲ ನಿನ್ನ meetingoo?

ಅಮ್ಮಾವ್ರು

ಅಯ್ಯೋ! ನನ್ನ meeting ಹಾಳಾಗ್ಹೋಗ್ಲಿ.....ಬರ್ತೇನೆ!; babyನೂ ಕರ್ಕೊಂಡು!...

ಕಮಲು

(draws Saroja's face to her breast and kissing her on the fore-head) ಆಂ! ಈಗ ನೀನು womanಉ....!

ನರಸಿಂಹಯ್ಯ

(Entering precipitately)

ಲೇ!

(ಕಮಲು stands up)

ಅಮ್ಮಾವ್ರು

ಲೇ!! ಯಾರನ್ನಂದದ್ದು.....? I shall have no woman...no lady who is my friend and guest, spoken to as....ಲೇ! ನಾವೇನು hens ಅಂತ ತಿಳ್ಕೊಂಡ್ರಾ?....Ladiesನ ಹ್ಯಾಗೆ address ಮಾಡ್ಬೇಕೂಂಬೋದನ್ನ, ಮೊದ್ಲು ಹೊರಗ್ಹೋಗಿ ಕಲ್ತ್ಕೊಂಡು ಆ ಮೇಲೆ ವಳಕ್ಬಂದು ಮಾತಾಡಿ...Till then..lay your bad manners else-where...."ಲೇಂ"ತೆ..."ಲೇ"!

ನರಸಿಂಹಯ್ಯ

ಅದಕ್ಕೆಲ್ಲ time ಇಲ್ಲ....Madam! (sottovoce) never in my mortal life....ನನ್ನ mortal lifeನಲ್ಲಿ ಒಂದು ಕ್ಷಣಕೂಡ ಒಬ್ಬ ಹೆಂಗ್ಸಿಗೆ ಹೆದಕ್ಕೊಂಡಿಕ್ತೇನೇಂತ ನನ್ನ ಸ್ವಪ್ನದಲ್ಲಿಯೂ expect ಮಾಡ್ಲಿಲ್ಲ....ಆದ್ರೆ! necessity ನೀತೀನೂ ಇಲ್ಲ ನ್ಯಾಯಾನೂ ಇಲ್ಲ! It is only fear for my lifeಉ....ನನ್ನ ಪ್ರಾಣಕ್ಬಂದಿರೋ ಹಾನೀ ಈಗ ಒಬ್ಬ ಹೆಂಗ್ಸಿನ ಕಾಲಿಗೆ ಬೀಳೋ ಸ್ಥಿತೀಗೆ ತಂದಿಟ್ಟಿಧೆ...ಆದ್ರಿಂದ ಪ್ರಾರ್ಥಿಸ್ಕೋತೇನೆ,...in the

meanwhile….God bless you madam!; but you know what I mean!! ನಿಮ್ಮ tigeroo….

ಕಮಲು

ಅಯ್ಯಯ್ಯೋ! ನಾಯಿ ಕಿತ್ಕೊಂಡ್‌ಬಿಡ್ತೇ?!

ನರಸಿಂಹಯ್ಯ

ಇನ್ನೂ ಇಲ್ಲಾ!…ಆದ್ರೆ,….ಆ Hamletನ ಹಾಗೆ "To ಕಿತ್ಕೊಳ್ಳು or not to ಕಿತ್ಕೊಳ್ಳು" ಅಂತ ಎಗರಾಡ್ತಿಧೆ…ಆ horrible ನಾಯಿ….!

ಅಮ್ಮಾವ್ರು

ಆಗಬೇಕು….ನನ್ನ babyನ brutelet ಅಂತ ಅಂದೋರ್ಗೆ… ಆಗ್ಬೇಕು….ಚನ್ನಾಗಾಗ್ಬೇಕು…. ನಿಮ್ಮ tiger questionಗೆ ಇಲ್ಲ್ಯಾರೂ answer ಕೊಡೋಹಾಗಿಲ್ಲ.

ನರಸಿಂಹಯ್ಯ

Madam!.. ಅದಕ್ಕೆ answer ಕೇಳೋಕೆ ಬರ್ಲಿಲ್ಲ ನಾನು;….ಇನ್ನೊಂದು question ಕೇಳೋಕೆ ಬಂದೆ… ಆ ನಾಯಿ ಕುತ್ಗೇಗೆ ಕಟ್ಟಿರೋ ಆ ಸರಪಣಿ strengthoo ಅದರ ಕತ್ತಿನ ಶಕ್ತೀಗೆ commensurate ಆಗಿಧೆಯೇ ಅಂತ ಕೇಳೋಕ್ಬಂದೆ…….ಲೇ….ಕ್ಷಮಿಸಿ….ಡಿ… ಲೇಡಿ!……. you, another madam!!…ನೀನಾದ್ರೂ ಕೇಳೇ….ಆ ಸರಪಣಿ ಭದ್ರವಾಗಿದೆಯೇಂತ?….ಅವನೋ….!

ಅಮ್ಮಾವ್ರು

Whom do you mean ಅವನೊ?

ನರಸಿಂಹಯ್ಯ

I mean my beloved friendoo!—your unfortunate husbandಉ—poor Subbu the gutless, though God knows I love him!...

ಅಮ್ಮಾವ್ರು

How dare your address my husband like that?...He is a man....you are a worm..a bloated worm....!!

ನರಸಿಂಹಯ್ಯ

ವೊಪ್ಕೊಂಡೆ madam!....apologiesಉ! ನನಗೋ, ಈ roomನಲ್ಲಿ ಸನ್ನಿಧಾನ ಇರೋವರ್ಲೂ ಕಾಲಿಡೋಕೆ ಇಷ್ಟವಿಲ್ಲಾ...ತಮ್ಮಯಜ್ಮಾನ್ರೋ ಆ ಕುದ್ರೇನ dog-cartಗೆ hitch ಮಾಡ್ತಿಧಾರೆ.....ಆ Tigerಓ ಎಗರಾಡ್ತಿಧೆ!...ಸರಪ್ಣೀಯೋ ಈಗ್ಲೋ ಆಗ್ಲೋ ಕಿತ್ಕೊಳ್ಳೋಹಾಗಿಧೇ....!

ಕಮಲು

ಆ ನಾಯಿ ಹೆದರ್ಕೆ ಏನೂ ಇಲ್ಲಾಂತ ಹೇಳೇ!....ಎಷ್ಟು ದೂರ ನಿನ್ jokeಉ!?

ಅಮ್ಮಾವ್ರು

ಆ ನಾಯಿ, ಕಿತ್ಕೊಳ್ಳೋದಿಲ್ಲ...ಒಂದ್ವೇಳೆ ಕಿತ್ಕೊಂಡ್ರೂನೂವೆ....it does not like pork.... ಅದಕ್ಕೆ ಹಂದೀ ಮಾಂಸ ಅಂದ್ರೆ ಹೇಸ್ಗೆ....ನೀನೇನು ಹೆದರ್ಬೇಡಿ....you, a man, frightened of a dog!

[Exit C]

ನರಸಿಂಹಯ್ಯ

ನಗೇ! ನಗೇ!! ಮುದ್ದಿಟ್ಕೋ ಅವಳ್ನ!....ನಗು ನನ್ನ ಸ್ಥಿತೀನ್ನೋಡಿ!...ಕಲತ್ಕೋ ಅವ್ಳ ವಿದ್ಯೆಗಳ್ನೆಲ್ಲ!....ruin ಮಾಡು ನನ್ನ happy little homeನ!....ಲೇ!....

ಅಮ್ಮಾವ್ರು

(Entering) What did you say....ಲೇ! to a lady!... say that again!...

ನರಸಿಂಹಯ್ಯ

ಕ್ಷಮ್ಸಿ! Madam: 'ಲೇಂ'ತ ಹೇಳೀ'ಡಿಂ'ತ ಹೇಳೋ ಅಷ್ರಲ್ಲಿ ತಾವು ಧುಮಿಕ್ಬಿಟ್ರಿ....ಕ್ಷಮ್ಸಿ....ಲೇಡಿ!...ನಿಮ್ಮ dog safe ಅಂತಾ ಹೇಳಿದ್ರಲ್ಲಾ,....ಅಷ್ಟು ಸಾಕು ನನಗೆ.......I shall efface myself....ನಾನೂ ನನ್ನ wifeಊ ಮುಂದಿನ ವಿಷ್ಯಗಳ್ನ ನಾವಿಬ್ರೂ alone ಆಗಿರೋವಾಗ ವಿಚಾರ ಮಾಡ್ಕೋತೇವೆ...

[Exit L]

ಅಮ್ಮಾವ್ರು

ಏನೋ ಕಮಲೂ! ನೀನೇನ್ಹೇಳಿದ್ರೂ, he is a horrible brute to you!

ಕಮಲು

ಇವರೇ! ಪಾಪ! ಇವರು baby, ಸರೋಜಾ!

ಅಮ್ಮಾವ್ರು

Baby! ನಿನ್ husband!! baby!!!

ಕಮಲು

ಹೌದು! ನಮ್ಮ ನಮ್ಮ husbandsನ ನಾವು understand ಮಾಡ್ಕೊಂಡ್ರೋ, ಅವರು ನಮಗೆ babies ಅಲ್ದೆ ಬೇರೇನೂ ಅಲ್ಲ............ understand ಮಟ್ಗೆ ಮಾಡ್ಕೊಳ್ದೆ ಹೋದ್ರೋ ನಮ್ಮನ್ನ babies ಅಂತ ಬೆದರಸ್ತಾರೆ... ಇವರನ್ನ brute ಅಂತೀಯಲ್ಲ ನೀನು....ನಮ್ಮನೇಲಿರೋ real bruteಉ ನನ್ನ ಕೊನೇಮಗ... ಹುಟ್ಟಿ ವಂಭತಿಂಗ್ಳು ಕೂಡ ಇಲ್ಲ...ಆ bruteletಓ brutekinಓ, ಇಲ್ಲ ಆ little bruteಓ...."ಎಲಾ! ಇಷ್ಟು ದೊಡ್ಡೋರು ದಿನವೆಲ್ಲ ದುಡ್ದು, ದಣ್ದು, ವಿಶ್ರಾಂತೀಗೇ ಅಂತ ಮಲಕ್ಕೊಂಡು ನಿದ್ದೆಮಾಡ್ತಿಧಾರಲ್ಲ...ಮತ್ತಿರಿಗಿ ಬೆಳಕ್ಹರಿಯುತ್ಲೂನೂವೆ ದುಡ್ಯೋದಕ್ಕೆ ಏಳ್ಬೇಕಲ್ಲ....ಇವರ್ನ disturb ಮಾಡ್ಬಾರ್ದು" ಅಂತ ತೋಚತ್ತ್ಯೇ ಅವನಿಗೆ? ಮೂರು ಘಂಟೆ ರಾತ್ರಿಗೆ ಸರ್ಯಾಗಿ "ಕಿಟಾರ್" ಅಂತ ಒಂದೇ ಕಿರ್ಲು ಕಿರಲ್ತಾನೆ.... ಥಟ್ನೆದ್ದು... ಅವನ್ಹೊಟ್ಟೇಗೆ ಹಾಲು ಹುಯ್ದು...ಅವ್ನ ಗೊಂಬೇನ ಅವನೆದುರ್ಗೆ ಆಡಿಸ್ತಾ ತೂಗಿದ್ರೇನೇ ಪುನಃ ನಿದ್ದೆ ಹೋಗೋದು ಅವ್ನು...ನಮ್ಮ ಯಜ್ಮಾನ್ರು, ಅವನ larger editionoo, ಅಷ್ಟೇ!....ಇವರಿಗೆ ಬೇಕಾದ ಉಪಚಾರಾನ ವದಗ್ಸೋವರ್ಗೂ ಕಿರಲ್ತಾರೆ...ವದಗ್ಸುತ್ಲೂ... ಶಾಂತಿ!...ಹಯ್ಯೋ! ಸರೋಜ! married lifeಏ ಹೀಗೆ... ಗಂಡ ಹೆಂಡ್ತೀಲಿ....ಇಬ್ರಲ್ಲಿ ಯಾರಿಗಾದ್ರೂ ಒಬ್ಬರಿಗೆ ಮತ್ತೊಬ್ರು babyನೆ......!

ನಮ್ಮನೇಲಿ ನಮ್ಮ ಯಜಮಾನ್ರು ನನಗೊಂದು baby….! ನಿಮ್ಮನೇಲಿ ನಿಮ್ಮ ಯಜಮಾನ್ರು ನೀನೊಂದು baby!!…

ಅಮ್ಮಾವ್ರು

ನಾನು! baby!! ನಮ್ಮ ಯಜ್ಮಾನ್ರಿಗೆ!!! baby !!!! The idea! ನಮ್ಮ ಮನೇಲಿ equal rightsoo……..ನನಗೂ ಇವರಿಗೂ…!

ಕಮಲು

ಏನು equal rightsoo?, ನಿಂಗೂ ನಿಮ್ಮ ಯಜ್ಮಾನ್ರಿಗೂ?…ನನ್ನ little baby ಅತ್ತಾಗ ಅದಕ್ಕೆ ಹಾಲು…ನಮ್ಮನೆ ದೊಡ್ಡ baby ಕಿರ್ಲಿದಾಗ್ಲೆಲ್ಲಾ ಅದಕ್ಕೆ ಕಾಫಿ, ತಿಂಡಿ, ಊಟ….ಹೀಗೆ ಈ babies ಕಿರ್ಲೋದಕ್ಕೆಲ್ಲ ಸಮಾಧಾನ ಮಾಡ್ತಾ ಈ ಹರಕಲ್ ಸೀರೆ, ಕೆದರಿದ ಕೂದ್ಲು ಇಟ್ಕೊಂಡು ನನ್ನ ಸಂಸಾರಾನ ನಾನು ಹೇಗೆ ಜರುಗಿಸ್ತಿಧೇನೆಯೋ, ಹಾಗೇ ನಿಮ್ಮನೇ ಚಿಕ್ಕ baby ಕಿರ್ಲಿದಾಗ್ಲೆಲ್ಲಾ ತೊಟ್ಲು ತೂಗ್ತಾ, Tigerನ ಆಡಿಸ್ತಾ, ನಿಮ್ಮನೆ ದೊಡ್ಡ baby ಕಿರ್ಲಿದಾಗೆಲ್ಲ ಅದಕ್ಕೆ cocoa ಕಾಸ್ತಾ,….ಅದರ meetingಗೂ, ಗಾಳಿ ಸವಾರೀಗೂ dog-cartನ ಓಡಿಸ್ತಾ….ಅದರ dressಗೆ ಬೇಕಾದ silk sarees, brooches, wrist-watch ಇದೆಲ್ಲ ಕೊಳ್ಳೋದಕ್ಕೆ ಬೇಕಾದ ದುಡ್ನ ದಿನಾ ದುಡ್ಡೂ ದುಡ್ಡೂ ಒದಗಿಸ್ತಾ, ಹರಕಲಂಗಿ, ಕೆದರಿದ ಕೂದ್ಲು ಇಟ್ಕೊಂಡು ಆತನ ಸಂಸಾರ ಆತ ಜರುಗಿಸ್ತಿಧಾರೆ…

ಅಮ್ಮಾವ್ರು

(bowed down…….. sinks on Kamalu’s shoulder)

ಈ ಕಥೆ ಎಲ್ಲ answer ಅಲ್ಲ ನನ್ನ questionಗೆ;.... ನಾನು ಹೇಳಿದ್ದು, ನಿನ್ನ brute of a husbandoo....ನಿನ್ನ beautiful loving natureನ appreciate ಮಾಡೋದಿಲ್ವಲ್ಲಾಂತ....!

ಕಮಲು

ಅದಕ್ಕೇನು ಮಾಡೋದು........ ನಿಮ್ಮ ಯಜ್ಮಾನ್ರು,.......beautiful loving natureನ his wonder of a wifeಉ appreciate ಮಾಡ್ತಿಧಾಳೆಯೇ?....ಕೋಪಿಸ್ಕೋಬೇಡ baby! ಇನ್ಮೇಲೆ appreciate ಮಾಡ್ಕಾಳೆ ಅಲ್ವೆ? (lifting up Saroja's face by the chin) ನಿಮ್ಮ ಯಜ್ಮಾನ್ರು, strong, snow-clad mountain of patienceಉ... ಆದ್ರೆ ಎಂದ್ಗೂ ಮರೀಬೇಡ....ಆ mountain ವಳ್ಗೆ burning Volcano of love ವೊಂದಿಧೇ ಅಂತ...ಈ ಹಾಳು meetings ಬಿಡು........ ಆ horrible ayahನ ವದ್ದೋಡ್ಸು.......ದಿನಾ babyನೂ tigerನೂ ಕರ್ಕೊಂಡು ನಮ್ಮನೇಗ್ಬಾ.......ನಿಮ್ಮೋರ್ನೂ ಕರ್ಕೊಂಡ್ಬಾ.... ಹುಂ?.......ಹುಂ!....

ಅಮ್ಮಾವ್ರು

ಆಗ್಩ಿ ಕಮಲು....ಆದ್ರೆ ನಾನು ನಿಮ್ಮ ಯಜ್ಮಾನ್ರನ್ನ ಏನೇನೋ ಅಂದದ್ದನ್ನೆಲ್ಲಾ...?

ಕಮಲು

ಅನ್ನು....Good for him....ಇನ್ನೂ ಚನ್ನಾಗಿ ಅನ್ನು....ಒಳ್ಳೇದು; ಅರ್ಧ reason ನಿನ್ನ ನಮ್ಮನೇಗೆ ಕರದದ್ದು ಅದಕ್ಕೆ....ಇವ್ರು ಬರ್ತಾಬರ್ತಾ ಮಿತಿಮೀರ್ತಿಧಾರೆ....somebody must stop him for me....ಮನೆ ಹುಡುಗ್ರು

ಮಿತಿಮೀರಿದ್ರೆ ಬೆತ್ತ ತಗೊಂಡು ಬಾರ್ಸಿ ಅಡಗಸ್ಬೇಕು ಅವರ್ನ...ಹೆತ್ತೋರ್ಗೋ ಮನಸ್ಬಾರ್ದು....ಬಾಯಿ ಬರ್ದು....ಕೈಬರ್ದು....ಅದಕ್ಕೆ ಹ್ಯಾಗೊಬ್ಬ teacherನ ಇಟ್ಟು ನಮ್ಮಿಂದಾಗದ ಕೆಲ್ಸಾನ ಅವನ ಬಾಯಿಂದ್ಲೂ ಕೈಯಿಂದ್ಲೂ ಹ್ಯಾಗೆ ಮಾಡಿಸ್ತೇವೋ.... ಹಾಗೇ, ನಮ್ಮನೇಲಿ ಇವರ್ನ ನನ್ನ ಬಾಯಿಂದ ತರೋಕೆ ಆಗದ ದಾರೀಗೆ ನಿನ್ನ ಬಾಯಿಂದ್ಲಾದ್ರೂ ತರಿಸಿದ್ರೇನೇ ನಮ್ಮನೇಗೆ peaceಉ.!....ಅದಕ್ಕೇ, ನೀನೇನು spare ಮಾಡ್ಬೇಡ ಇವರ್ನ.......!

ಅಮ್ಮಾವ್ರು

(after a long pause) ಅಬ್ಬ! ಏನು foolಏ ನಾನು....ಕಮಲು?

ಕಮಲು

Foolಏ? Not at all! ಜ್ಞಾನ ಬರೋವರ್ಗೂ babiesoo foolsಏ!....ಬೆಳದ್ಮೇಲೆ wise mothers and fathersoo!...ಈಗ ತಾನೆ ಆಗ್ಲಿ ಯಾವಾಗತಾನೇ ಆಗ್ಲಿ...ನೀನು ನನಗಿಂತ ಎರಡ್ರಷ್ಟು ಬೆಳದ್ರೆ ತಾನೇ ಆಗ್ಲಿ ನನ್ನ baby...ನನಗಿಂತ ಎರಡು class ಕೆಳಗೆ ಸೇರಿದಾಗ ನಿನ್ನ ತಪ್ಪನ್ನೆಲ್ಲ ತಿದ್ದಿ ನಿನ್ನ ಆ home-workನ ಹೇಗೆ ಮಾಡಿಸ್ತಿದ್ನೋ, ಹಾಗೇ, ಈಗ್ಲೂ ನಿನ್ನ ತಪ್ಪನ್ನೆಲ್ಲ ತಿದ್ದಿ (sweeping her arm gracefully round the room) ಈ home-workನ ಮಾಡ್ಸೋ ನನಗೆ, ನೀನು baby ನೇ! ಆದ್ರೆ ಬೆಳೆದ big baby!

[Kamalu puts her arm round Saroja]

ನರಸಿಂಹಯ್ಯ

(Entering)

Go on! Go on!!! ಮುದ್ದಾಡಿ!!!

[Kamalu & Saroja separate]

ಅಮ್ಮಾವ್ರು

Hateful….ನೀವಿರೋ roomನ airನ breathe ಮಾಡೋದು ಕೂಡ hateful….!

(Walking towards kitchen door C…sweeping her arm)

ಆ beautiful angelನ appreciate ಮಾಡೋಕೆ brain ಎಲ್ಲಿಧೆ?…heart ಎಲ್ಲಿಧೆ, ನಿಮ್ಗೆ?…ಮಂಗನ್ಹಾಗಿರೋ ನಿಮ್ಮ ಕೈಲಿ, ದೇವ್ರು ಜ್ಞಾನಾತಪ್ಪಿದ್ದಾಗ ಕೊಟ್ಟ ಆ ಮಾಣಿಕ್ಯಾನ….appreciate ಮಾಡೋಕೆ ಯೋಗ್ಯತೆ ಇಲ್ದಿದ್ರೂನೂವೆ….brutalise ಮಾಡಿ….Beast!!!

[Exit]

ನರಸಿಂಹಯ್ಯ

ಕೇಳ್ದೇನೇ?….

ಕಮಲು

ಕೇಳ್ದೆ.

ನರಸಿಂಹಯ್ಯ

ಮತ್ತಿನ್ನೂ ಬದ್ಕಿಧೀಯಲ್ಲೇ?....ಲೇ! ನಿನ್ನ appreciate ಮಾಡೋದಿಲ್ವೇನೇ ನಾನೂ?....

ಕಮಲು

ಮಾಡ್ದೆ ಏನು?

ನರಸಿಂಹಯ್ಯ

(Strutting up to her and gesticulating wildly)

ಲೇ! ನಾನು ಮಂಗ್ನೇನೇ?...

ಕಮಲು

ಅಯ್ಯೋ! ಅಲ್ಲವಲ್ಲಾಂದ್ರೆ 1?

ನರಸಿಂಹಯ್ಯ

ಮಂಗನ್ಹಾಗಿದೆಯೇನೇ ನನ್ನ ಮೂತಿ! ?

ಕಮಲು

ಇಲ್ಲವಲ್ಲಾ !!

ನರಸಿಂಹಯ್ಯ

ಮತ್ತೆ ಹೇಳ್ತಾಳಲ್ಲೇ ಅವ್ಳು! ನೀನೂ ಕೇಳ್ತಾ ನಿಂತಿಧೀಯಲ್ಲೇ!...! ಲೇ!

(Putting his hands over her shoulders and shaking her well)

ನಿನ್ನ brutalise ಮಾಡ್ತೇನೇನೇ ನಾನು?

ಕಮಲು

ಅಯ್ಯೋ! ಇಲ್ಲವಲ್ಲಾ!

ನರಸಿಂಹಯ್ಯ

ಇನ್ನು ಕೇರಿಕೇರಿಯೆಲ್ಲ ಕಿರಲ್ತಿಥೆಯಂತಲ್ಲೇ? ಯಾಕೆ ಈ ಸ್ಥಿತೀಗೆ ತಂದಿಟ್ಟಿದ್ದು ನನ್ನ?...ಈ ಹರಕಲ್ ಸೀರೆ ಯಾಕೆ ಉಟ್ಕೋತೀಯಾ?

ಕಮಲು

ಬೇರೆ ಸೀರೆ ಸದ್ಯ ಇಲ್ಲ ಅಂದರೆ!

ನರಸಿಂಹಯ್ಯ

ಯಾಕಿಲ್ಲ? ತಿಂಗ್ಳಿಗೆ 75 ರೂಪಾಯಿ ಕೊಟ್ಟದ್ದರಲ್ಲಿ ತಿಂಗ್ಳಿಗೆ ಒಂದೊಂದು ರೂಪಾಯಿಂನಂತೆ ಎರಡೂವರೆ ವರ್ಷದಲ್ಲಿ ಮುವ್ವತ್ತು ರೂಪಾಯಿ ಮಿಗ್ಸಿಥೇನೇ ಅಂತ ಹೇಳಿದ್ಯಲ್ಲ....ಏನ್ಮಾಡ್ದೆ ಅದನ್ನ?

ಕಮಲು

ಕೆಂಚೂಗೊಂದು ಕಿರಿಗೆ ಕೊಂಡ್ಕೊಟ್ಟೆ....

ನರಸಿಂಹಯ್ಯ

ಅದನ್ನಿಲ್ಲಿ ಬೊಗಳಿ ಏನೇ ಪ್ರಯೋಜ್ನಾ?....ಈ ಹರಕಲ್ ಸೀರೆ ಕಟ್ಕೊಂಡು ಇಲ್ಲಿ ಬಂದು ಈ ಪಿಶಾಚಿ ಬಾಯಲ್ಲಿ ಬಿದ್ದು ಪೇಚಾಡೋ ಸ್ಥಿತೀಲಿ ನನ್ನ ಇಟ್‌ಬಿಟ್ಟು, ಮುದ್ದಾಡ್ತಿಧೀಯಲ್ಲೇ?!... ಗಂಡನ್ನ ಬೈತಾಳಲ್ಲಾ ಅಂಬೋ ರೋಷ ಕೂಡ ಇಲ್ದೆ ಮುದ್ದಾಡ್ತಿಧೀಯಲ್ಲೇ!....ಅದಿರ್ಲೀ! ನನ್ನ ಸಂಬ್ಳಾನೆಲ್ಲ ನಾನು clubಗೆ ತಗೊಂಡ್ಹೋಗಿ....ಏನ್ಹೇಳಿದ್ದು ಅವ್ಳು... ಹೇಳು....ಹೇಳು....ನಿಜಾನ....ಹೇಳ್ತೀಯೋ ಇಲ್ವೋ?

ಕಮಲು

ನಿಜಾನೇ? ಕುಡಿದು ಕುಣಿದಾಡ್ತೀರಾಂತೇನೋ ಹೇಳಿದ್ಲು.

ನರಸಿಂಹಯ್ಯ

ಕುಡ್ದು ಕುಣ್ದಾಡೋದು!...ಅಲ್ವೆ! ಅವ್ಳಂತೂ ನಾಚ್ಗೆ ಹೇಸ್ಗೆ ಇಲ್ದೆ ಬೊಗ್ಳಿದ್ರೆ...ಮರ್ಯಾದೆ ಇಲ್ದೆ ಅದನ್ನೇ ತಿರ್ಗಿ ಬೊಗುಳ್ತೀಯಲ್ಲೆ ನನ್ಹತ್ರ?....ಇನ್ನು...ನನ್ನ wifeಏ ಹೀಗೆ start ಮಾಡ್ಬಿಟ್ರೇ horridಓ...horridoo ನನ್ನ positionoo!...ಅದಿರ್ಲಿ! ಈ ಬಾಬತ್ನ ಯಾರೇ ಅವ್ಳಿಗೆ ಹೇಳಿದ್ದು? ನೀನ್ತಾನೇ?

ಕಮಲು

ಅಯ್ಯೋ! ನೀವೇ ಹೇಳಿದ್ರಲ್ಲ! ನಿಮಗೆ ಬರೋ ಸಂಬ್ಳದಲ್ಲಿ 425 ರೂಪಾಯಿ ನೀವೇ ಇಟ್ಕೊಂಡು ಮಿಕ್ಕ 75 ರೂಪಾಯಿನಲ್ಲಿ ನನ್ನ ಸಂಸಾರಾನ ನಾನು ಜಾಣ್ತನವಾಗಿ

ಜರಗಿಸ್ಕೋತೇನೆ ಅಂತ, ಅವಳ ಯಜ್ಮಾನ್ರ ಹತ್ರ....ನೀವೇ ಹೇಳ್ದೆ ಅಂತ, ಹೇಳಿದ್ರಲ್ಲಾಂದ್ರೆ!?

ನರಸಿಂಹಯ್ಯ

ಗೊತ್ತೂ! ಗೊತ್ತೂ! That gutless wormoo,—though God knows I love himoo—ಅವನು ಬೊಗ್ಗಿರ್ಬೇಕು! ಈಗ್ನೋಡು!....ನನ್ನ! ಈ ಪಿಶಾಚಿ ಆಗ್ಲಿ! ಈ ಊರ್ನಲ್ಲಿರೊ ಯಾವ ಪಿಶಾಚಿ ಆಗ್ಲಿ...ಊರು ಬಾಯಿಂದೆಲ್ಲ ಉಗಿಸ್ಕೊಳ್ಳೊ ಸ್ಥಿತೀನೇ ನೋಡ್ತಾ ಆನಂದ ಪಡ್ತಿರ್ತೀಯಾ? ಇಲ್ಲಾ....ಈ ಪ್ರಾಣಿ ನಿನ್ನ ಗಂಡ ಅಂಬೋದ್ನ ಜ್ಞಾಪಸ್ಕೊಂಡು, ಈ ಅವಸ್ಥೆಯಿಂದ relieve ಮಾಡೋಕೆ ಸಹಾಯಾನೇನಾದ್ರೂ ಮಾಡ್ತೀಯಾ....ಇಲ್ಲಾ, ನೇಣ್ಹಾಕ್ಕೊಂಡೋ, ಆ Tigerನ ಬಾಯ್ಲಿ ನನ್ನ ಕುತ್ಗೆ ಕೊಟ್ಟೋ....ನಿನ್ನ ಕಣ್ಣೆದುರ್ಗೆ ನನ್ನ ಪ್ರಾಣಗ್ಳು ಬಿಡ್ಲಾ?

(striking an attitude)

Think of your ತಾಳೀಯೇ! you horror! think of your ತಿರುಮಾಂಗಲ್ಯ! ನಿನ್ನ ನಂಬೀ, ಮದ್ವೇಲಿ ನಿನ್ನ ಕುತ್ಗೇಗೆ ಕಟ್ಟಿದ್ನೆಲ್ಲಾ, ಅದನ್ನ ಮರೀದೇ....ಕೊಡು answerನ...!

ಕಮಲು

ಹಯ್ಯಯ್ಯೋ! ಇದೇನಿದು?....ಏನಾಗ್ಬೇಕುಂದ್ರೆ?....ನೀವು ಏನು ಹೇಳಿದ್ರೂ ಮಾಡ್ತೇನೆ!....ಏನಾಗ್ಬೇಕು....?

ನರಸಿಂಹಯ್ಯ

ಏನೂ ಇಲ್ಲ...ಮೆರೀಬೇಕು!...ಈ ಪಿಶಾಚಿಗಳೆದುರ್ಗೆ ನಮ್ಮನೇ ಮಹಾರಾಣೀಹಾಗೆ...ಮೆರೀಬೇಕು!....ನನ್ನ car ಇನ್ಮೇಲೆ ನಿಂದೆ....ನನ್ನ victoriaನೂ ನಿಂದೆ....500 ರೂಪಾಯಿನ ಪೀತಾಂಬ್ರ ಕಟ್ಕೊಂಡೂ...ಸ್ನಾನಮಾಡು....carನಲ್ಲೊಂದು ಕಾಲು Victoriaನಲ್ಲೊಂದು ಕಾಲು ಇಟ್ಕೊಂಡು, ನಿನ್ನ horrible battalion of babiesನ ಎರಡ್ಬಂಡೀಲೂ ತುಂಬ್ಕೊಂಡು, ಬೀದಿ ಬೀದಿ ಉದ್ದಕ್ಕೂ ಪೀತಾಂಬ್ರ ಹಾಸ್ಬಿಟ್ಟು...ಅದರ್ಮೇಲೆ ಮೆರೀಬೇಕು ನೀನು!...ಹಗ್ಲೂ ರಾತ್ರಿ...ನನ್ನ ಸಂಬ್ಳಾನೆಲ್ಲ ನೀನೇ ಇಟ್ಕೋ....ಇಟ್ಕೊಂಡು ಒಂದ್ಕಾಸಿಲ್ದೆ ಖರ್ಚುಮಾಡಿ.....-ರತಿಹಾಗಿದ್ದ ಮುಖಾನ ಪ್ರೇತದ್ಹಾಗೆ ನಾನು ಮಾಡಿಧೇನೇ ಅಂತ ಬೊಗಳ್ತಾಳಲ್ಲೆ ಈ ಪಿಶಾಚೀ—ತಿಂದೂ ತಿಂದೂ....ಕೊಬ್ಬೀ ಕೊಬ್ಬೀ... double ರತೀ ಹಾಗ್ಮಾಡ್ಕೊಂಡು ನಿನ್ಮುಖಾನ ಅವ್ಳಿಗೆ ತೋರ್ಸಿ....ನಿನ್ಮೂಗಿನ್ನ ಅವ್ಳಮೂಗಿಗೆ ತಾಕ್ಸಿ...'ಈಗೇನುಹೇಳ್ತೀಯಾಂತ' ಅವಳ್ನ ನಾನು ಕೇಳೋಸ್ಥಿತೀಗೆ ತಂದಿಡ್ಬೇಕು ನನ್ನ....ಇದು ನಿನ್ನ departmentoo! ನಂದೋ (ticking off with his fingers) thingoo! bruteಉ! ಮೂಸಳೆ! pigoo! ಬೊಜ್ಜೆ!....ಬೊಜ್ಜೆ....ಏನು personalಏ ಆ ಪಿಶಾಚಿ!...ಅಂದ್ಲಲ್ಲಾ? ವೊಂದು ಗಾಡೀನೂ ಹತ್ತದೇ... ನಿನ್ನ carನ ಮುಖಾನೂ ನೋಡ್ದೆ....Officeಗೂ ಮನೇಗೂ ಓಡ್ಯಾಡಾದ್ರೂನೂ ನನ್ನ ಬೊಜ್ಜೇನ ಕರಗಿಸ್ಕೊಂಡು, ಪೈಲ್ವಾನ್ ಹಾಗೆ ಅವಳೆದುರ್ಗೆ ನಿಲ್ದಿದ್ರೆ ನನ್ಹೆಸ್ರು "ಹುಲಿಯೂರು ನರಸಿಂಹಯ್ನೇ" ಅಲ್ಲ!...ದೆಲ್ಲ ಮಾಡ್ತೀಯೇನೇ?....

ಕಮಲು

ನಿಮ್ಮಿಷ್ಟ ಹ್ಯಾಗೋ ಹಾಗೆ....ಅಂದ್ರೆ!

ನರಸಿಂಹಯ್ಯ

God bless you....ನಿನ್ನ co-operationಗೆ God bless you!

ಗಂಡ

(Entering)

Narasim! Dear boy!

(Drawing back)

ಕ್ಷಮ್ಸು! Intrude ಮಾಡ್ತೇನೇಂತ ಗೊತ್ತರ್ಲಿಲ್ಲ!...

ನರಸಿಂಹಯ್ಯ

Come in!....Is everything for our escape from this house of ಪಿಶಾಚೀಸ್, ready....?

ಗಂಡ

ಕ್ಷಮ್ಸು! Dear boy! ನಮ್ಮನೆ ಹೆಸ್ರು, home of ಪಿಶಾಚೀಸ್ ಅಲ್ಲ..."Home of peaceಉ"..."ಶಾಂತಿ ನಿವಾಸ" .,..!

ನರಸಿಂಹಯ್ಯ

You mean, home of piecesoo?....you, a man gone to pieces....your child, a piece of a bruteಉ........and your worst-halfoo a piece of a....a....ಉಂ! ಬ್ಯಾಡಾ! dash your "ಶಾಂತಿ ನಿವಾಸ"....we want to go home...!

ಗಂಡ

Certainly dear boy! ಮನೇಗ್ಹೋಗು….!but don't dash my "ಶಾಂತಿ ನಿವಾಸ" before my worthy sisteroo….!

ನರಸಿಂಹಯ್ಯ

Oh! dash it all… I mean….Bless you. . the whole lot of you…but you know what I mean!….ಈ ಮನೇಲಿ ನೀವೆಲ್ರೂ ಸಂತೋಷವಾಗಿ ಹಾಳಾಗ್ಹೋಗಿ…..I mean, ಸಂತೋಷವಾಗಿರಿ… ಯಾವ ಶನಿ ಮುಚ್ಕೊಂಡಿತ್ತೊ….ನಿನ್ನೆ ನಿನ್ನ meet ಮಾಡ್ದೆ… ಹಾದೀಲಿ ಹಾಯಾಗಿ ಹೋಗ್ತಿದ್ದೋನು. ಮತಿಗೆಟ್ಟು ಮಾರೀಮನೇಗೆ ಹೊಕ್ಹಾಗೆ….ಇಲ್ಬಂದು….ನನ್ನ sweet wifeನೂ ಕರ್ಕೊಂಡು ಬಂದು….ನಿಮ್ಮನೇ presiding ಪಿಶಾಚಿ ಬಾಯ್ಲಿ ಬೈಸ್ಕೊಂಡು….ನಿಮ್ಮ Tigerಗೆ ಬೆದರ್ಕೊಂಡು, ಯಾಕೆ ಬಂದ್ನೋ ಕಾಣೆ…ಕ್ಷಮ್ಸು dear boy! You know I love you! ನೀನೋ….ನಿಮ್ಮನೇ brutesಓ….ನಿನ್ನ bruteletಓ….ಇನ್ನಾ ಮಹಾತಾಯಿ, ಆ ಮಾರಮ್ಮ—to describe her at her mildest—ಆಕೇನೋ….ನಿನ್ನ cocoa timeಓ….ನೀವೆಲ್ರೂ ಹಾಳಾಗ್ಹೋಗಿ…(to Kamalu) ಬಾರೇ!…ನನ್ರಾಣೀ! ಬಾ!….(suddenly cooling) ಹೌದು, dear boy! what about the dog-cart?….and the Tiger chained up, I suppose ?….

ಗಂಡ

Certainly Narasim!…….. one moment!(walking up to back door C) ನಮ್ಮ worthy visitorsoo depart ಮಾಡ್ತಿಧಾರೆ!….dear….!

ಅಮ್ಮಾವ್ರು

(From within) ಇದೋ ಬಂದೆ….(entering) ಇದೇನು?

ನರಸಿಂಹಯ್ಯ

ಏನೇನು?

ಅಮ್ಮಾವ್ರು

ಅಲ್ಲಾ!, ಕೈಹಿಡಿದ ಕುರೀನ, ಕುತ್ಗೇಗೆ ಹಗ್ಗಾ ಹಾಕಿ ಎಳಕೊಂಡ್ಹೋಗೋದು ಬಿಟ್ಬಿಟ್ಟು..... ಭುಜದ್ಮೇಲೆ arm ಹಾಕ್ಕೊಂಡು lead ಮಾಡ್ತೂ ಹೋಗ್ತಿಧೀರಾ?.... ಇದೇನ್ಬಂತು sudden spasm of affectionoo?!

ನರಸಿಂಹಯ್ಯ

Sudden spasm of affection ಅಲ್ಲಾ, madam! Longstanding, deep, deep, sincere, fervent, soul-stirring ocean of abysmal loveಉ!.... sudden spasm of affection ಅಂತೆ? ಏನೇ?

ಕಮಲು

ನೀವು ಹೇಳಿದ್ದೇ!!...

ನರಸಿಂಹಯ್ಯ

ಕೇಳಿದ್ರಾ Madam! ನಾನು ಹೇಳಿದ್ದು!...ಏನೋ ನನ್ನ lifeಉ....ನನ್ನ studiesoo....ನನ್ನ public activitiesoo....ನನ್ನ service to my country...ಇನ್ನು ಅವ್ಳ household worriesoo...the care of her childrenoo....I should say our childrenoo....our little angels, brutelets ಅಲ್ಲ-Madam! angeletsoo.... ಇವುಗ್ಳ ಗಲಭೇಲಿ ನಮ್ಮ ಪರಸ್ಪರ ಪ್ರೇಮದ ಮಧ್ಯೆ ಮಂಜು ಬಿದ್ದಾಗೆ ಇದ್ರೂನೂವೆ...ಇವತ್ತು

ಗ್ರಹಚಾರವಶಾತ್....ನಿಮ್ಮೀ ಶನಿ ಕೊಂಪೇಗೆ accidental ಆಗಿ ಬಂದು... ನಿಮ್ಮ heartless treatment of your husbandನೂ, ಅವನ gutless submission to your ಪಿಶಾಚಿ selfನೂ,—though God knows I love him—, ಬಂದೋರ ಬಾಯಿ ಮುಚ್ಸೋ ಹಾಲಾಹಲದ್ಹಾಗಿರೋ ನಿಮ್ಮ ಈ ಮಹಿಮೇನೂ ಗಮನಿಸಿದ್ದರ ಮೇಲೆ...ಆ ಮಂಜು ಎದ್ಹೋಗಿ, ...ನನಗೆ ನನ್ನೀ ರಾಣಿ ಮೇಲೆ....ಅಲ್ಲ!....ನನ್ನ ರಾಣೀಗೆ ನನ್ನ ಮೇಲೆ...(drawing Kamalu to himself)...I am not ashamed to admit it!

ಕಮಲು

ಅಯ್ಯೋ! ಇದೇನೂಂದ್ರೆ ಆಭಾಸಾ....?

ನರಸಿಂಹಯ್ಯ

Your ಆಭಾಸಾ be dashed! ಪ್ರಪಂಚ ಎಲ್ಲಾ ನೋಡ್ಲಿ....ಕೇಳ್ಲೀ....ನನಗೆ ನನ್ನೀ ರಾಣಿ....ರಾಣಿ be dashed ...ಈ ಚಕ್ರವರ್ತಿನಿ...ಚಕ್ರವರ್ತಿನಿ be dashed... god-dess...no! ದೇವಿ....that is right...ದೇವಿ ಮೇಲೆ, ಮದುವೆ ಆದಾಗ್ಲೆ ಇದ್ದ ಮಮತೆ....loveಉ madam...real loveಉ,....ಮೇಲೆ ಹೇಳಿದ aforesaid ಮಂಜು ಎದ್ಹೋಗಿ....ಆಕಾಶ್ದಲ್ಲಿ ಪ್ರಕಾಶಿಸ್ತಿರೋ ಸೂರ್ಯನ್ಹಾಗೆ ಧಗ ಧಗ ಧಗಾಂತ ಉರೀತಿದೆ madam! ನಮ್ಮಿಬ್ರ ಹೃದಯಗ್ಳಲ್ಲೂ....ಉರೀತಿಧೆ!...ಏನೇ?...

ಕಮಲು

ನೀವು ಹೇಳಿದ್ದೇ...!

ನರಸಿಂಹಯ್ಯ

ನಮ್ಮಿಬ್ರ ಸಂತೋಷ್ದಲ್ಲಿ bad blood ಯಾಕೆ, ನಮ್ಗೂ, ನಿಮ್ಗೂ ಜಗ್ಳ ಯಾಕೆ....ನೀವು ನಮ್ಮಿಬ್ರಿಗೂಮಾಡಿದ ಅಪ್ಮಾನಾನ ನಾವು ಮನ್ನಿಸಿಧೇವೆ ಅಂಬೋದ್ನ ಸೂಚಿಸೋಕೂ....ಮತ್ತೂ ನಮ್ಮಿಬ್ರ loving partner-ships study ಮಾಡ್ಯಾದ್ರೂ, ನನ್ನ dear friendoo ತಾವೂ, ...ನಿಮ್ಮ connubial relationsನ improve ಮಾಡ್ಕೊಳ್ಳೋಕೂ,....ನಾನು, on behalf of my wifeಉ....ದೇವಿ....ನಾಳೆ tea-timeಗೆ invite ಮಾಡ್ತೇನೆ... ಅಲ್ಲ ಮಾಡ್ತೇವೆ...ತಮ್ಮನ್ನೂ, ನನ್ನ poor beloved but gutless brotherನೂ!... ನಮಸ್ಕಾರ, ಆಶೀರ್ವಾದ....ಹೇಗ್ಬೇಕಾದ್ರೂ ಇಟ್ಕೊಳ್ಳಿ....ನಾವು ಬರ್ತೇವೆ...!

ಕಮಲು

(Over Narasimhayya's shoulders whispering)

ನಾನ್ಹೇಳ್ಳಿಲ್ವೇ! Baby! Big baby! (aloud) ನಾಳೆ ಬಾ ನಿನ್ನ babyನ ಎತ್ಕೊಂಡು,....ನಿನ್ನ big babyನೂ Tigerನೂ ಕರ್ಕೊಂಡು,...ಬಾ..!

ಅಮ್ಮಾವ್ರು

ಕ್ಷಮ್ಸು! Dear boy! Cocoa!

ನರಸಿಂಹಯ್ಯ

Oh! dash your Cocoa! We want to go home! ಅಲ್ವೇನೇ?

ಕಮಲು

ನೀವು ಹೇಳಿದ್ಹಾಗೇ!

ಗಂಡ

Certainly dear boy! Do go home!; but after drinking this Cocoa!

[ನರಸಿಂಹಯ್ಯನ ಕೈಗೆ ಕೋಕೋ ಕಪ್ಪನ್ನು ಕೊಡುವನು. ಅವನು ಅದನ್ನು ಕುಡಿದು, ತಕ್ಷಣ "ಬಾರೇ! ನನ್ನರಾಣೀ! ಬಾ!" ಎಂದು ಕಮಲುವಿನ ಕೈಹಿಡಿದು ಎಳೆದುಕೊಂಡು ಹೋಗುವನು]

ಗಂಡ

(ಅಮ್ಮಾವ್ರಿಗೆ) Visitorsd ಕಳಿಸಿಬಿಟ್ಟು ಬರ್ತೇನೆ, dear!

ಅಮ್ಮಾವ್ರು

Certainly: ಬೇಗ ಬನ್ನಿ! ಅಷ್ಟರಲ್ಲಿ ಮಗು ಎದ್ದರೆ ನಾನು ನೋಡಿಕೋತೇನೆ.

[ಗಂಡನ ಕಣ್ಣುಗಳಲ್ಲಿ ಅಲ್ಪವಿಸ್ಮಯದ ಹೊಳಪು ಕಾಣುವುದು]

[ಗಂಡ Exit]

[ಅಮ್ಮಾವ್ರು, Rocking chairನಲ್ಲಿ ಸುಮ್ಮನೆ ಕುಳಿತು ಮೊದಲನೆಯ ದೃಶ್ಯದಲ್ಲಿ ಓದುತ್ತಿದ್ದ ಪುಸ್ತಕವನ್ನೇ ಮತ್ತೆ– ಆದರೆ ಅರೆಮನಸ್ಸಿನಿಂದ–ಓದುತ್ತ. ಸ್ವಲ್ಪ ಶಬ್ಧವು ಕೇಳಿ ಬಂದಾಗೆಲ್ಲ. ಮಗು ಮಲಗಿರುವ ತೊಟ್ಟಿಲ ಕಡೆ ನೋಡುತ್ತಾ, ಪುನಃ ಓದುತ್ತಾ ಇರುವಳು.

ಎರಡು ನಿಮಿಷಗಳಾದ ಅನಂತರ ಮಗು ಏಳುವುದು. ಅಮ್ಮಾವ್ರು, ಥಟ್ಟನೆ ಪುಸ್ತಕವನ್ನು ತೆಗೆದಿಟ್ಟು, ತೊಟ್ಟಿಲನ್ನು ಸಮೀಪಿಸಿ, "ಮಲಕ್ಕೊ-ಮಗು", "ಮಲಕ್ಕೊ",

ಎಂದು ಮೆಲ್ಲನೆ ಹೇಳುತ್ತ, ಮಗುವನ್ನು ತಟ್ಟಿ ನಿಧಾನವಾಗಿ ತೂಗುವಳು. ಅಷ್ಟೊತ್ತಿಗೆ ಸರಿಯಾಗಿ ಗಂಡನ ಪ್ರವೇಶ–ಮರೆಯಲ್ಲಿ–ಇದನ್ನು ನೋಡಿ ವಿಸ್ಮಯಗೊಂಡು ನಿಲ್ಲುವನು.

"ಅಮ್ಮಾವ್ರು", ತೊಟ್ಟಿಲಿಗೂ Rocking chairಗೂ ಮೊದಲು "ಗಂಡನು" ಕಟ್ಟಿದ್ದ ಹಗ್ಗವನ್ನು, ಪುನಃ ತಾನೇ Rocking chairಗೆ ಕಟ್ಟಿ, ಮೊದಲಿನಂತೆ ಪುಸ್ತಕವನ್ನು ಹಿಡಿದು Rocking chairನಲ್ಲಿ ಕುಳಿತು, ಎಚ್ಚರಿಕೆಯಿಂದ rock ಮಾಡುವುದರ ಮೂಲಕ ತೊಟ್ಟಿಲನ್ನೂ ತೂಗುತ್ತ, ಓದಲಾರಂಭಿಸುವಳು.

ಗಂಡನು ಒಳಗೆ door Cಗೆ ಹೋಗುವ ಮೊದಲು ತೊಟ್ಟಿಲಿನ ಹತ್ತಿರ ಮೆಲ್ಲನೆ ಬಂದು 'ಅಮ್ಮಾವ್ರ'ಲ್ಲಿ ಆಗಿರುವ ಬದಲಾವಣೆಯನ್ನು ಗ್ರಹಿಸಿ, ನಿಟ್ಟುಸಿರಿಟ್ಟು, ಮುಗುಳುನಗೆಯ ಮೊಗದಿಂದ – ತೊಟ್ಟಿಲು – ಅಮ್ಮಾವ್ರು – ಕಡೆಗೆ ನೋಡುತ್ತ ನಿಲ್ಲುವನು]

[ಫರದೆಯು ಮೆಲ್ಲನೆ ಜಾರುವುದು]

For Permission to Stage

Kailasam's plays, apply to

the publishers with a Royalty of

Rupees TWENTY only

for each performance

ಕೈಲಾಸಂ’s

ಇತರ ಕೃತಿಗಳು

ತಾವರೆಕೆರೆ

ಗಂಡಸ್ಕತ್ರಿ

ಸತ್ತವನ ಸಂತಾಪ

ಹೋಂ ರೂಲು

ವೈದ್ಯನ ಜಾಡ್ಯ

ಬಹಿಷ್ಕಾರ

ಪೋಲೀ ಕಿಟ್ಟಿ

ಶೂರ್ಪನಖ

ತಾಳೀಕಟ್ಟೋಕ್ಕೂಲೀನೇ

ಟೊಳ್ಳು ಗಟ್ಟಿ ಭಾಗ ೩

ಪ್ರಕಾಶಕರು

ಮಾಧವನ ಸನ್ಸ್

ಬೆಂಗಳೂರು—ಮದರಾಸ್

270-1943,—ಬೆಂಗಳೂರು ಸಿಟಿ ಕೆ. ಪಿ. ಹೆಚ್. ಪ್ರೆಸ್ಸಿನಲ್ಲಿ ಡಿ. ವಿ. ರಾಮರಾಯರಿಂದ ಮುದ್ರಿತವಾಗಿದೆ.